# ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ

ನವೆಂಬರ್ 2021 ಮಾಸ ಪತ್ರಿಕೆ

ಸಂಪುಟ/Volume : 44
ಸಂಚಿಕೆ/Issue : 2
ಪುಟ/Pages : 12
ಬೆಲೆ/Price : ₹ 10/–

**Akhila Karnataka Shikshaka Samachar | November 2021 | Monthly**






A Journal of Karnataka Rajya Madhyamika Shikshaka Sangha (R.)

# ಸ್ವಾತಂತ್ರ್ಯೋತ್ಸವದ ಅಮೃತೋತ್ಸವ

**ಭೋ ದೀಪ ಬ್ರಹ್ಮರೂಪಸ್ತ್ವಂ ಅಂಧಕಾರ ನಿವಾರಕ।**
**ಇಮಾಂ ಮಯಾ ಕೃತಾಂ ಪೂಜಾ ಗ್ರಹಾಣತ್ವಂ ಪ್ರವರ್ಧನ॥**

**ದೀಪ ಜ್ಯೋತಿ ಪರಬ್ರಹ್ಮ ದೀಪಂ ಮೃತ್ಯು ವಿನಾಷಣಂ**
**ದಿಪೇನ ಸರ್ವತೆ ಸಾಧ್ಯಮ್ ಸಂಧ್ಯಾ ದೀಪಂ ನಮೋಸ್ತುತೆ.**

**ಓಂ ಅಸತೋಮ ಸದ್ಗಮಯ,**
**ತಮಸೋಮ ಜ್ಯೋತಿರ್ಗಮಯ**
**ಮೃತ್ಯೋರ್ಮ ಅಮೃತಂಗಮಯ**
**ಓಂ ಶಾಂತಿ ಶಾಂತಿ ಶಾಂತಿ:**

**ಅದಿತ್ಯಾನಾಮಹಂ ವಿಷ್ಣುಜ್ಯೋರ್ತಿಷಾಂ ರವಿರಂಶುಮಾನ್।**
**ಓಂ ಶುಭಂ ಕರೋತಿ ಕಲ್ಯಾಣಮ್ ಆರೋಗ್ಯಂ ಧನ ಸಂಪದಃ।**
**ಶತ್ರು ಬುದ್ಧಿ ವಿನಾಶಾಯ ದೀಪ ಜ್ಯೋತಿ ನಮೋಸ್ತುತೇ॥**

**ಆತ್ಮಾ ಮೇ ಶುದ್ಧ್ಯಂತಾಂ ಜ್ಯೋತಿರಹಂ** । (ಪಾಪವಿಲ್ಲದ ಜ್ಯೋತಿಯಾಗಲು ನನ್ನ ಆತ್ಮ ಶುದ್ಧಿಯಾಗಲಿ).

ಈ ಎಲ್ಲಾ ಶ್ಲೋಕಗಳನ್ನು ಓದುತ್ತಿರುವ ನಮ್ಮ ಜಾಣ ಓದುಗರಿಗೆ ನಾನು ಯಾವ ವಿಷಯದ ಬಗ್ಗೆ ಹೇಳಬಹುದೆಂದು ಗೊತ್ತಾಗಿರಬಹುದು. ಹೌದು, ದೀಪ, ಬೆಳಕಿನ ಮಹತ್ವದ ಬಗ್ಗೆ. ದೀಪವೆಂದರೆ ಮನಸ್ಸಿನಲ್ಲಿ ಅನೇಕ ಭಾವನೆಗಳು ಮೂಡಬಹುದು. ಅದರಲ್ಲಿ ಮೊದಲನೇಯದು ಬೆಳಕು. ಯಾವುದು ಕತ್ತಲು ಇಲ್ಲದಂತೆ ಮಾಡುವುದು, ಅಂಧಕಾರವನ್ನು ಇನ್ನಿಲ್ಲದಂತೆ ಮಾಡುವುದು ಅದೇ ಬೆಳಕೆಂದು ನಾವು ಹೇಳಬಹುದು. ಬೆಳಕು ಎಂದ ತಕ್ಷಣ ನಮ್ಮ ಮನಸ್ಸಿನಲ್ಲಿ ಬರುವ ಭಾವನೆಗಳೆಂದರೆ ಒಳ್ಳೆಯತನ, ಆರೋಗ್ಯ, ಸುವಿಚಾರ, ಸನ್ನಡತೆ, ಸುಕರ್ಮ ಎಂದು. ಬೆಳಕಿಗೆ ಮಹತ್ವ ಬರುವುದೇ ಕತ್ತಲಿನಿಂದ. ಕತ್ತಲು ಇಲ್ಲದಿದ್ದರೆ ಬೆಳಕಿಗೇನು ಮಹತ್ವ ಹೇಳಿ. ಪ್ರಪಂಚದಲ್ಲಿ ಕತ್ತಲು ಎಂದು ಇದ್ದದ್ದೇ ಅನೇಕ ಒಳ್ಳೆಯ ಕಾರಣಗಳಿಂದ. ಆದರೆ ಮನುಷ್ಯನಾದವನು ಪ್ರಕೃತಿಯ ಯಾವುದೇ ಒಳ್ಳೆಯದನ್ನು ಹಾಗೆಯೇ ಬಿಡುವುದಿಲ್ಲ. ಹಾಗೆಂದು ಮಾನವ ತನ್ನ ಬುದ್ಧಿವಂತಿಕೆಯಿಂದ ಬೆಳಕನ್ನು ಕಂಡುಹಿಡಿದದ್ದು ತಪ್ಪು ಎಂದು ನಾನು ಹೇಳುತ್ತಿಲ್ಲ. ಆದರೆ ನಾವೆಲ್ಲಾ ಕತ್ತಲು ಎಂದ ತಕ್ಷಣ ಕೆಟ್ಟದೆಂದು ಯೋಚನೆ ಮಾಡಲು ಪ್ರಾರಂಭ ಮಾಡಿಬಿಡುತ್ತೇವೆ, ಅದು ತಪ್ಪು ಎಂದು ಅಷ್ಟೇ. ಇರಲಿ, ಪ್ರಕೃತಿಯ ವಿರುದ್ಧ ಹೋಗುವ ಪ್ರಕೃತಿ ಇತ್ತೀಚಿಗೆ ಪಾಠ ಕಲಿಸುತ್ತಿರುವುದನ್ನು ನಾವು-ನೀವೆಲ್ಲಾ ಅನುಭವಿಸುತ್ತಿದ್ದೇವೆ. ಇನ್ನಾದರೂ ಮನುಷ್ಯ ಪ್ರಕೃತಿಗೆ ವಿರುದ್ಧವಾಗಿ ಹೋಗುವುದನ್ನು ಬಿಟ್ಟರೆ ಒಳ್ಳೆಯದು.

ದೀಪಾವಳಿಯೆಂದರೆ ದೀಪಗಳ ಆವಳಿ ಎಂದು. ಕೇವಲ ದೀಪಾವಳಿಯಂದು ಮಾತ್ರ ದೀಪಗಳನ್ನು ಬೆಳಗದೇ, ಕತ್ತಲನ್ನು ಹೋಗಲಾಡಿಸುವ ಪ್ರಯತ್ನ ಮಾಡದೇ, ಮನುಷ್ಯನ ಮನಸ್ಸಿನಲ್ಲಿ ತುಂಬಿರುವ ಕತ್ತಲೆಯನ್ನು ಹೋಗಲಾಡಿಸಲು ನಾವು ನೀವೆಲ್ಲಾ ವರ್ಷವಿಡೀ ಪ್ರಯತ್ನ ಪಟ್ಟರೆ, ಆಗ ಮಾತ್ರ ಎಲ್ಲೆಡೆ ಬೆಳಕು ಇರಲು ಸಾಧ್ಯ. ಹಿಂದೆ ಅವಿಭಕ್ತ ಕುಟುಂಬಗಳಿದ್ದಾಗ ಒಂದು ಮನೆಯಲ್ಲಿ ಎಷ್ಟು ಜನರಿರುತ್ತಿದ್ದರೆಂದು ತಿಳಿಯುವುದೇ ಕಷ್ಟವಾಗುತ್ತಿತ್ತು. ಅಷ್ಟು ಜನರಿದ್ದರೂ ವೈಮನಸ್ಸು, ದ್ವೇಷ, ಅಸೂಯೆ, ಜಗಳ ಎಂಬ ಭಾವನೆಗಳಿಗೆ ಜಾಗವಿರುತ್ತಿರಲಿಲ್ಲ. ಈಗ ನಾವಿಬ್ಬರು ನಮಗಿಬ್ಬರು ಅಥವಾ ಒಬ್ಬರಿದ್ದರೂ, ಇರುವ ಮೂರು ಜನರ ಮನಸ್ಸುಗಳು ಒಂದೊಂದು ದಿಕ್ಕಿನಲ್ಲಿರುತ್ತದೆ. ಮನೆಯವರ ಏಳಿಗೆಯನ್ನೇ, ಒಳಿತನ್ನೇ ಸಹಿಸದಷ್ಟು ಮನುಷ್ಯ ಸ್ವಾರ್ಥಿಯಾಗುತ್ತಿರುವುದನ್ನು ನೋಡಿದರೆ ಪ್ರಪಂಚ ಪೂರ್ಣ ಕತ್ತಲೆನೆಡೆಗೇ ಹೋಗುತ್ತಿದೆಯೇ? ಎಂಬ ಪ್ರಶ್ನೆ ಮೂಡದಿರದು. ಈ ಸ್ವಾರ್ಥ ಎಂಬುದು ಕೇವಲ ಕುಟುಂಬದಲ್ಲಿ ಮಾತ್ರ ಇರದೇ, ಜಾತಿ, ಧರ್ಮ, ರಾಜ್ಯ ಮತ್ತು ರಾಷ್ಟ್ರಕ್ಕೆ ಹರಡುತ್ತಿರುವುದೇ ಇತ್ತೀಚಿನ ದೊಡ್ಡ ಸಮಸ್ಯೆಯೆಂದರೆ ತಪ್ಪಾಗಲಾರದು. ಸ್ವಾರ್ಥವನ್ನು ತೊರೆದು ನಿಸ್ವಾರ್ಥದೆಡೆಗೆ ಮನಸ್ಸು ಹೋಗುವ ದೀಪ ಬೆಳಗುವ ಅವಶ್ಯಕತೆಯಿದೆ. ವಿದ್ಯಾರ್ಥಿಗಳ ಮನಸ್ಸಿನಲ್ಲಿಯೂ ಈ ರೀತಿಯ ನಿಸ್ವಾರ್ಥದ ದೀಪವನ್ನು ಹಚ್ಚುವ ಗುರುತರ ಜವಾಬ್ದಾರಿ ನಮ್ಮೆಲ್ಲಾ ಶಿಕ್ಷಕ ಬಂಧುಗಳ ಮೇಲಿದೆ. ಆ ಜವಾಬ್ದಾರಿಯನ್ನು ದೀಪಾವಳಿಯ ದಿನದಂದು ದೀಪಗಳನ್ನು ಹಚ್ಚಿ ಕತ್ತಲನ್ನು ಹೋಗಲಾಡಿಸಿ, ಸಂತೋಷ ಪಡುವಷ್ಟೇ ಸಂಭ್ರಮದಿಂದ ನಾವೆಲ್ಲಾ ಮಾಡುತ್ತೇವೆಂಬ ಭರವಸೆಯೂ ನಮಗಿದೆ.

**ಅಭಿನಂದನೆ**

- ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ದಕ್ಷಿಣ ಮಧ್ಯ ಕ್ಷೇತ್ರೀಯ ಪ್ರಮುಖರಾಗಿ ಪುನರಾಯ್ಕೆಯಾಗಿರುವ ಶ್ರೀಯುತ ಬಾಲಕೃಷ್ಣಭಟ್ ಸರ್ ರವರಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಅಭಿನಂದಿಸುತ್ತದೆ.

- ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀಯುತ ನಾಡೋಜ ಮಹೇಶ್ ಜೋಶಿಯವರಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಅಭಿನಂದನೆಗಳನ್ನು ಅರ್ಪಿಸುತ್ತಾ, ಕನ್ನಡ ನಾಡು-ನುಡಿ ಏಳಿಗೆಗೆ ನಿಮ್ಮ ಜೊತೆ ನಾವೆಲ್ಲಾ ಇರುತ್ತೇವೆಂಬ ಭರವಸೆಯನ್ನು ನೀಡುತ್ತಿದೆ.

ಸಂಪಾದಕ

## ಪರಿವಿಡಿ


- ಅರವತ್ತಾರನೇ ಕರ್ನಾಟಕ ರಾಜ್ಯೋತ್ಸವಾಚರಣೆಯ ಸಂದರ್ಭ - ಹಿರಿಯ ಸಾಹಿತಿಗಳ ಅಂತಃಕರಣದ ನುಡಿಗಳ ಸ್ಮರಣೆ 3
- ಸತ್ಯಾಗ್ರಹದ ಜೈಲು ಹಕ್ಕಿ - ಜತೀಂದ್ರ ದಾಸ 4
- ಲಾಲ್ ಬಾಲ್ ಪಾಲ್ ಮತ್ತು ಬಂಕಿಮ ಚಂದ್ರರ ಕೊಡುಗೆ 5
- ಗೀತಾ ಜಯಂತಿ 6
- ರಾಜ್ಯ ಮಟ್ಟದ ಮಹಿಳಾ ಅಭ್ಯಾಸ ವರ್ಗದ ವರದಿ 7
- ಮಹಿಳಾ ಅಭ್ಯಾಸವರ್ಗ ಕಾರ್ಯಕ್ರಮ - ಅಭಿಪ್ರಾಯ 8
- ವಿದ್ಯಾರ್ಥಿ ಮಿತ್ರ 10

# ಅರವತ್ತಾರನೇ ಕರ್ನಾಟಕ ರಾಜ್ಯೋತ್ಸವಾಚರಣೆಯ ಸಂದರ್ಭ

# ಹಿರಿಯ ಸಾಹಿತಿಗಳ ಅಂತಃಕರಣದ ನುಡಿಗಳ ಸ್ಮರಣೆ

(ಸಂಗ್ರಹ)
**ನಂ. ನಾಗಲಕ್ಷ್ಮಿ**
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬೆಂಗಳೂರು



ಕನ್ನಡ ಜನರಲ್ಲಿ ಕನ್ನಡದ ಅಭಿಮಾನ ಹುಟ್ಟುವಂತೆ ನಾವು ಮಾಡಬಹುದಾದ ಎಲ್ಲ ಕೆಲಸಗಳೂ ದೇಶಸೇವೆ ಮಾತ್ರವಲ್ಲ, ಇಡೀ ಮಾನವಕುಲಕ್ಕೇ ನಾವು ಸಲ್ಲಿಸುವ ಸೇವೆಯೂ ಆಗುತ್ತದೆ. ಘೋಷಣೆ, ಭಾಷಣ ಮಾತ್ರವೇ ಸಾಲದು. ಆದರೆ ಈ ಕೆಲಸ ಹೇಗೆ ನಡೆಯಬೇಕೆಂಬುದನ್ನು ತುಂಬ ಆಳವಾಗಿ ಯೋಚಿಸಿ ನಿರ್ಧರಿಸಬೇಕು. ಕನ್ನಡದ ಬಗ್ಗೆ ಪ್ರೀತಿ, ಅಭಿಮಾನ ಇವು ಪ್ರತಿಯೊಬ್ಬ ಕನ್ನಡಿಗನ ಅಂತರಂಗದ ಅವಿಭಾಜ್ಯ ಅಂಗವಾಗುವ ಹಾಗೆ ಮಾಡುವ ಕೆಲಸ ಇನ್ನೂ ಆರಂಭವಾಗಿಯೇ ಇಲ್ಲ. ಇದು ಆರಂಭವಾಗಬೇಕಾದದ್ದು ಪ್ರತಿಯೊಬ್ಬ ವ್ಯಕ್ತಿಯ ಅಂತರಂಗದಲ್ಲಿ, ನಮ್ಮ ಚಿಂತನೆಯ ಮಟ್ಟದಲ್ಲಿ; ವಿವೇಚನೆಯ ಮೂಸೆಯಲ್ಲಿ; ಕನ್ನಡದ ಅಭಿಮಾನ ಕರಗಿ ಹೊರಗೆ ಹರಿದಾಗ ಅದು ಕೆಸರು ಕಳೆದ ಅಪ್ಪಟ ಚಿನ್ನವಾಗುತ್ತದೆ. ಇದಕ್ಕೆ ಸ್ವತಂತ್ರವೂ, ಸ್ವಾವಲಂಬಿಯೂ ಆದ ಶಿಕ್ಷಣ ಪದ್ಧತಿ ಕನ್ನಡದಲ್ಲಿ ಕಿಂಡರ್‌ಗಾರ್ಟನ್ ಮಟ್ಟದಿಂದಲೇ ಆರಂಭವಾಗಬೇಕು. ಮಕ್ಕಳಲ್ಲಿ ಪರಿಸರದ ಅನುಭವವಾಗುವ ಹಾಗೆ, ಪರಿಸರಕ್ಕೆ ಸ್ಪಂದಿಸುತ್ತ ನಮ್ಮ ಮಕ್ಕಳು ಸ್ವತಃ ಕಲಿಯಲು ತಕ್ಕ ಏರ್ಪಾಟನ್ನು ಮಾಡಬೇಕು. ಸರ್ಕಾರ ಈ ಕೆಲಸ ಮಾಡಲು ಮುಂದಾಗದಿದ್ದರೆ ನಾವೇ ಮುಂದಾಗಿ ಎಲ್ಲ ಕಡೆಗಳಲ್ಲಿಯೂ ಕನ್ನಡ "ನರ್ಸರಿ ಶಾಲೆ" ಗಳನ್ನು ಆರಂಭಿಸಿ ಅಲ್ಲಿ ಮಕ್ಕಳು ಸ್ವತಂತ್ರವಾಗಿಯೂ, ಶಿಸ್ತಿಗೆ ಒಳಪಡುವಂತೆಯೂ ಮನಸ್ಸನ್ನು ಬೆಳೆಸಿಕೊಳ್ಳುವಂತೆಯೂ ಮಾಡಬಲ್ಲ ಆಧುನಿಕ ಜೀವನದ ಪ್ರಜಾತಂತ್ರದ ಮೂಲಗುಣಗಳನ್ನು ಅರಗಿಸಿಕೊಂಡಿರುವ ಶಿಕ್ಷಕವೃಂದವನ್ನು ತಯಾರು ಮಾಡಲು ನಾವು ಮುಂದಾಗಬೇಕು.



ಇದರ ಜೊತೆಗೆ ನಮ್ಮ ಜನಕ್ಕೆ ಕನ್ನಡ ಸಂಸ್ಕೃತಿಯ, ಸಾಹಿತ್ಯದ ಮುಖಾಮುಖಿ ಆಗುವ ಹಾಗೆ ವಿಶಾಲ ಕ್ಷೇತ್ರದಲ್ಲಿ ಕೆಲಸ ನಡೆಯಬೇಕು. ಕನ್ನಡದ ಉತ್ತಮ ಕೃತಿಗಳನ್ನು ಕನ್ನಡ ಓದಲು ಬರುವವರೆಲ್ಲರೂ ಸ್ವತಃ ಓದಿ ತಿಳಿದುಕೊಳ್ಳುವಂತೆ ನಿರಂತರವಾದ ವಯಸ್ಕರ ಶಿಕ್ಷಣ ನಡೆಯುತ್ತಲೇ ಇರಬೇಕು. ಪಂಪನ ಹೆಸರನ್ನು ಜಪಿಸುವುದಲ್ಲ, ಅವನ ಕಾವ್ಯವನ್ನೇ ಓದಿ ಕನ್ನಡದ ಹಿರಿಮೆಯ ಅರಿವು ಹಳ್ಳಿಯಲ್ಲಿರುವ ಅಕ್ಷರಸ್ಥನಿಗೂ ಸಾಧ್ಯವಾಗಬೇಕು. ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ಕನ್ನಡ ಸಾಹಿತ್ಯ ಸಂಸ್ಕೃತಿ ಹೇಗೆ ಬದಲಾಗುತ್ತ ಪರಿಪಕ್ವವಾಗುತ್ತ ಬಂದಿದೆ ಎಂಬುದನ್ನು ಕನ್ನಡದ ಪ್ರತಿಯೊಬ್ಬ ವ್ಯಕ್ತಿಯೂ "ಸ್ವತಃ" ತಿಳಿಯುವಂತೆ ಮಾಡಬೇಕು.

**ಡಾ|| ಎಂ. ಗೋಪಾಲಕೃಷ್ಣ ಅಡಿಗ (1982)**

ಈಗ ಅನೇಕ ಸಂಘ, ಸಮಾಜಗಳಲ್ಲಿ ಕನ್ನಡದಲ್ಲಿ ಉಪನ್ಯಾಸಗಳಾಗುತ್ತವೆ. ಇವುಗಳಲ್ಲಿ ಎಷ್ಟು ಜನಕ್ಕೆ ನಿಜವಾದ ಆಸಕ್ತಿ ಇರುತ್ತದೆ ಎಂದು ನನಗೆ ಒಂದೊಂದು ಸಾರಿ ಸಂದೇಹ ಹುಟ್ಟುತ್ತದೆ. ಇವುಗಳಲ್ಲಿ ಉತ್ಸವಕ್ಕಾಗಿ ನಡೆಸಿದವೆಷ್ಟು, ವರದಿಗಾಗಿ ನಡೆಸಿದವೆಷ್ಟು ಎಂಬ ಸಂದೇಹ ಹುಟ್ಟುತ್ತದೆ.

ಕನ್ನಡಿಗರಲ್ಲಿ ಕಾವು ಸಾಲದು, ಕಾವಿನಿಂದ ಕಾವ್ಯ, ಕಾವಿನಿಂದ ಕಾರ್ಯ; ಕನ್ನಡದ ಕಣ್ಮಣಿಗಳಂತಿರುವ ದೊಡ್ಡ ದೊಡ್ಡ ನಗರಗಳನ್ನು ನೋಡಿದರೆ ಈಗ್ಗೆ ಇಪ್ಪತ್ತೈದು ವರ್ಷಗಳಿಗೂ ಈಗಿಗೂ ಏನು ಅಂತರ? ಕನ್ನಡ ಮೇಲಕ್ಕೆ ಬಂತು, ಜನದ ಅಭಿಮಾನ ಹೆಚ್ಚಿತು ಅದು ಬೋಧನ ಭಾಷೆಯಾಯಿತು ಎಂದು ಸಂತೋಷಪಡುವಷ್ಟರಲ್ಲಿ ಕನ್ನಡೇತರರು ಅದಕ್ಕೆ ಅಡ್ಡಿಹಾಕಿದರು; ತಮ್ಮ ಭಾಷೆಯೂ ಬೋಧನ ಭಾಷೆಯಾಗಲಿ ಎಂದರು. ಅವರು ನಮ್ಮಲ್ಲಿ



ಬಂದು ನಿಂತು ಬಲವಾದರು, ಭಾಗ್ಯವಂತರಾದರು. ನಾವು ದೌರ್ಬಲ್ಯವನ್ನೂ ದಾರಿದ್ರ್ಯವನ್ನೂ ವರಿಸಿದರೆ ಅವರೇನು ಮಾಡಿಯಾರು?

ಕನ್ನಡಿಗರಿಗೆ ಕನ್ನಡ ದೇಶದಲ್ಲಿ ಹಿರಿಯ ಆಸ್ತಿಯಾಗಿ ಉಳಿದಿರುವುದು ಅವರ ಕನ್ನಡ ಭಾಷೆ; ಅದನ್ನು ಉಳಿಸಿಕೊಳ್ಳಿ ಎಂದು ಕನ್ನಡಿಗರಿಗೂ, ಉಳಿಸಿಕೊಡಿ ಎಂದು ಇತರರಿಗೂ ಪ್ರಾರ್ಥನೆ ಮಾಡಬೇಕಾಗಿದೆ. ಈಗ ಇರುವ ಅಡ್ಡಿ ಅಡಚಣೆಗಳು ಶಾಶ್ವತವಾಗಿರಲಾರವು. ಆದ್ದರಿಂದ ಎಲ್ಲ ಜನರೂ ಈ ಭಾಷೆ ಭಕ್ತಿಪರಾಯಣತೆಯನ್ನು ಅನುಮೋದಿಸುತ್ತಾರೆಂದು ನಂಬುತ್ತೇನೆ.

**ಡಾ|| ಎ.ಆರ್. ಕೃಷ್ಣಶಾಸ್ತ್ರಿ (1949)**



ಕರ್ನಾಟಕ ಭಾಷಾಭಿವೃದ್ಧಿಗಾಗಿ ನಡೆಯಬೇಕಾಗಿರುವ ಕಾರ್ಯಗಳು; ನಮ್ಮ ಪುರಾತನ ಗ್ರಂಥಗಳನ್ನು ಪ್ರಸ್ತುತ ಕಾಲಕ್ಕೆ ತಕ್ಕಂತೆ ಸಂಕ್ಷೇಪಗೊಳಿಸಿ ಪ್ರಕಟಿಸಬೇಕು. ಕಾಲ ನಡೆದ ಹಾಗೆಲ್ಲಾ ಗ್ರಂಥಗಳ ಸಂಖ್ಯೆಯು ಹೆಚ್ಚುತ್ತ ಹೋಗುವುದು; ಅನಾವಶ್ಯಕತವಾದ ಗ್ರಂಥಗಳನ್ನೂ ಸ್ವಾರಸ್ಯವಿಲ್ಲದ ಗ್ರಂಥಗಳನ್ನೂ ಓದಲು ಜನರಿಗೆ ಹೊತ್ತಿರುವುದಿಲ್ಲ. ಆದ ಕಾರಣ ನಮ್ಮ ಹಳೆಯ ಕಾವ್ಯಗಳಲ್ಲಿ ಸಾರವತ್ತಾಗಿರುವ ಭಾಗಗಳನ್ನು ಮಾತ್ರ ಸಂಗ್ರಹಿಸಿ, ಕಥೆ ಕೆಡದಂತೆ ಅವುಗಳನ್ನು ಸೇರಿಸಿ, ಅವುಗಳಲ್ಲಿರುವ ಕ್ಲಿಷ್ಟ ಪದಗಳಿಗೆ ಅರ್ಥಗಳನ್ನೂ ಕೊಟ್ಟು, ಆಯಾ ಕವಿಗಳ ಕಾಲದೇಶಗಳನ್ನೂ, ಗುಣವಿಶೇಷಗಳನ್ನೂ ಪೀಠಿಕೆಗಳಲ್ಲಿ ಸೂಚಿಸಿ, ಪುಸ್ತಕಗಳನ್ನು ಪ್ರಚುರಗೊಳಿಸಬೇಕು. ಅವು ನೋಟಕ್ಕೆ ಅಂದವಾಗಿ, ಮುದ್ರಣ ದೋಷಗಳಿಲ್ಲದೆ, ಸ್ವಲ್ಪ ಹೆಚ್ಚು ಕಡಿಮೆ ಒಂದೇ ಆಕಾರವುಳ್ಳವಾಗಿ, ಸಾಮಾನ್ಯ ಜನರಿಗೆ ತಕ್ಕ ಬೆಲೆಯುಳ್ಳವಾಗಿರಬೇಕು. ಊರೂರಿಗೂ ಮನೆ ಮನೆಗೂ ಪುಸ್ತಕಗಳನ್ನು ತಗೆದು ಕೊಂಡು ಹೋಗಿ ಮಾರಲು ಒಳ್ಳೆಯ ವ್ಯಾಪಾರದ ಏರ್ಪಾಟೂ ಇರಬೇಕು. ವಿದ್ಯಾವಂತರು ನೂತನ ಗ್ರಂಥ ನಿರ್ಮಾಣಕ್ಕೆ ಮನಸ್ಸುಕೊಡಬೇಕು.

**ಡಿ.ವಿ.ಜಿ (1920)**

ಕನ್ನಡವು ಸಂಮಿಶ್ರಿತ ಭಾಷೆ. ಅದರ ಶರೀರದಲ್ಲಿ ಬಹುಭಾಗ ಸಂಸ್ಕೃತದಿಂದ ಪರಿಪುಷ್ಟವಾದುದು.ಇದಕ್ಕಾಗಿ ಅದು ತಲೆತಗ್ಗಿಸಬೇಕಾಗಿಲ್ಲ. ಎಲ್ಲ ಭಾಷೆಗಳೂ ವಿಶ್ವಪ್ರಕೃತಿಯವು. ಅವುಗಳಲ್ಲಿ ತನಗೆ ಬೇಕಾದ ಸಾಮಗ್ರಿ ಯಾವುದರಲ್ಲಿದ್ದರೂ ಅದನ್ನು ಆರಿಸಿಕೊಳ್ಳುವ ಅಧಿಕಾರ ಪ್ರತಿಯೊಂದು ಭಾಷೆಗೂ ಉಂಟು.

**ಡಿ.ವಿ.ಜಿ (1932)**

# ಸತ್ಯಾಗ್ರಹದ ಜೈಲು ಹಕ್ಕಿ – ಜತೀಂದ್ರ ದಾಸ


■ ಶ್ರೀ ಅಶೋಕ.ಆರ್. ಚೌದರಿ
ಶಿಕ್ಷಕರು, ಸಾಹಿತಿಗಳು,
ಸರ್ಕಾರಿ ಪ್ರೌಢಶಾಲೆ,
ಶಿರವಾಟ, ಯಾದಗಿರಿ ಜಿಲ್ಲೆ






ಇಂದು ನಾವು ಸುಖಮಯ ಜೀವನ ನಡೆಸುತ್ತಿರುವುದಕ್ಕೆ ಹಿಂದೆ ಸಾವಿರಾರು ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ, ಬಲಿದಾನವೇ ಕಾರಣ ಹಾಗೂ ಅವರು ಹಗಲಿರುಳು ಮಾಡಿದ ಅಪಾರವಾದ ಶ್ರಮ ಸಾರ್ಥಕತೆ– ಅಡಗಿದೆ. ಈ ಪುಣ್ಯ ಭೂಮಿ ಭಾರತಾಂಬೆಯ ಭವ್ಯ ನೆಲವನ್ನು ಬ್ರಿಟಿಷರಿಂದ ರಕ್ಷಿಸಿಕೊಳ್ಳಲು, ಸ್ವಾತಂತ್ರ್ಯ ಹೋರಾಟಗಾರರು ಕ್ರಾಂತಿಕಾರರು ತಮ್ಮ ಪ್ರಾಣವನ್ನು ತ್ಯಾಗ ಮಾಡಿದ್ದಾರೆ. ಸ್ವಾತಂತ್ರ್ಯ ದಿನಾಚರಣೆ ಬಂದಿತೆಂದರೆ ಬೆರಳಣಿಕೆಯಷ್ಟು ಸ್ವಾತಂತ್ರ್ಯ ಹೋರಾಟಗಾರರನ್ನು ನೆನೆಯುತ್ತೇವೆ. ನಮಗೆ ಗೊತ್ತಿಲ್ಲದ ಅದೆಷ್ಟೋ ಕ್ರಾಂತಿಕಾರಿ ಹೋರಾಟಗಾರರನ್ನು ನೆನೆಯುವುದು ಕಡಿಮೆ. ಭಗತ್‌ಸಿಂಗ್‌ನ ಒಡನಾಡಿಯಾದ ಜತೀನದಾಸ ನಮ್ಮೆಲ್ಲರಿಗೆ ಅಪರಿಚಿತರಾಗಿಯೇ ಉಳಿದಿದ್ದಾರೆಂದರೆ ತಪ್ಪಾಗಲಾರದು. ಈ ಲೇಖನದ ಮೂಲಕ ಅಂತಹ ದೇಶಪ್ರೇಮಿಯನ್ನು ತಮಗೆಲ್ಲಾ ಪರಿಚಯಿಸುವುದೇ ನನ್ನ ಉದ್ದೇಶವಾಗಿದೆ.

ಸ್ವಾತಂತ್ರ್ಯ ಸಂಗ್ರಾಮದ ಕ್ರಾಂತಿಕಾರಿ ದೇಶಭಕ್ತ ಶ್ರೀ ಜತೀನದಾಸ ಅಥವಾ ಜತೀಂದ್ರದಾಸ ಅನ್ಯ ಪ್ರೀತಿಯ ಹೆಸರು ಜತೀನದಾ. ಇವರು 27 ಅಕ್ಟೋಬರ್ 1904ರಲ್ಲಿ ತಂದೆ ಬಂಕಿಮ ಬಿಹಾರಿ ದಾಸ, ತಾಯಿ ಸುಹಾಸಿನಿ ದೇವಿಯವರ ಪುಣ್ಯ ವೀರಗರ್ಭದಲ್ಲಿ ಜನನ. 9 ವರ್ಷದವರಿದ್ದಾಗ ತಾಯಿ ಸ್ವರ್ಗಸ್ಥರಾದರು. 1920ರಲ್ಲಿ 16ನೆಯ ವಯಸ್ಸಿನಲ್ಲಿ ಮೆಟ್ರಿಕ್ಯುಲೇಶನ್ (ಎಸ್‌ಎಸ್‌ಎಲ್‌ಸಿ) ಉತ್ತೀರ್ಣರಾದರು. ಆಗ ಎಲ್ಲೆಡೆ ಸ್ವಾತಂತ್ರ್ಯ ಪಡೆಯಲು ಆತುರರಾದ ಕ್ರಾಂತಿಕಾರಿಗಳ ವಾತಾವರಣವಿತ್ತು. ಮಹಾತ್ಮಾ ಗಾಂಧಿಯವರ ಅಸಹಯೋಗ ಆಂದೋಲನದಲ್ಲಿ ಭಾಗವಹಿಸಿ, ವಿದೇಶ ವಸ್ತ್ರ ವಿರೋಧಿ ಆಂದೋಲವನ್ನು ಬಟ್ಟೆಗಳ ಅಂಗಡಿಯ ಮುಂದೆ ನಡೆಸುತ್ತಿರುವಾಗ ಬಂಧಿಯಾದರು. 6 ತಿಂಗಳ ಸೆರೆಮನೆ ವಾಸದ ಆದೇಶವಾಯಿತು. ಆದರೆ "ಚೌರಿಚೌರಾ" ಘಟನೆಯ ನಂತರ ಗಾಂಧೀಜಿಯವರು ಆಂದೋಲನ ಹಿಂಪಡೆದಾಗ ನಿರಾಶೆಯಿಂದ ವಿದ್ಯಾ ಸಾಗರ ಕಾಲೇಜಿಗೆ ಭರ್ತಿಯಾದರು. ಈ ಘಟನೆ ಕಾಲೇಜಿನಲ್ಲಿ ಹೊಸ ತಿರುವು ಪಡೆಯಿತು.

ಕಾಲೇಜಿನಲ್ಲಿ ಒಬ್ಬ ಯುವಕನಿಂದ ಕ್ರಾಂತಿಕಾರಿ ಶಚೀಂದ್ರನಾಥ ಸನ್ಯಾಲರ ಪರಿಚಯವಾಯಿತು. 'ಹಿಂದುಸ್ಥಾನ ರಿಪಬ್ಲಿಕ್ ಅಸೋಸಿಯೇಷನ್' ನ ಸದಸ್ಯರಾದರು. ತಮ್ಮ ಸಾಹಸಪೂರ್ಣ ಕಾರ್ಯದಿಂದ ಸಂಸ್ಥೆಯಲ್ಲಿ ಮಹತ್ವದ ಸ್ಥಾನ ಪಡೆದು, ಬಾಂಬ್ ತಯಾರಿಸುವುದನ್ನು ಕಲಿತರು. 1925ರಲ್ಲಿ 'ದಕ್ಷಿಣೇಶ್ವರ ಬಾಂಬ್ ಕಾಂಡ್' ಹಾಗೂ 'ಕಾಕೇರಿ ಕಾಂಡ್' ಕಾರ್ಯಾಚರಣೆಯಲ್ಲಿ ಬಂಧಿಯಾದರು. ಆದರೆ ಹೆಚ್ಚಿನ ಸಾಕ್ಷಿ–ಪುರಾವೆಗಳು ಇಲ್ಲದ ಕಾರಣ ಗಡಿಪಾರು ಮಾಡಲಾಯಿತು. ಲಾಹೋರ್ ಕಾರಾಗೃಹದಲ್ಲಿ ಸರಕಾರದ (ಬ್ರಿಟಿಷ್) ದುರ್ವ್ಯವಹಾರ ವಿರೋಧಿಸಿ 21 ದಿನಗಳ ಉಪವಾಸ ಸತ್ಯಾಗ್ರಹ ಕೈಗೊಂಡರು. ಕಾರಾಗೃಹದಲ್ಲಿ ಇವರ ಆರೋಗ್ಯ ಹದಗೆಡುತ್ತಿರುವುದನ್ನು ಕಂಡ ಬ್ರಿಟಿಷ್ ಸರಕಾರ ಬಿಡುಗಡೆಗೊಳಿಸಿತು. 1928ರ ಕೊಲ್ಕತ್ತಾ ಕಾಂಗ್ರೆಸ್‌ನಲ್ಲಿ ಕಾಂಗ್ರೆಸ್ ಸೇವಾಬಲದಲ್ಲಿ 'ಶ್ರೀ ನೇತಾಜಿ ಸುಭಾಷ್ ಚಂದ್ರ ಭೋಸರ' ಸಹಾಯಕರಾಗಿದ್ದರು. ಅಲ್ಲಿಯೇ ಶ್ರೀ ಭಗತ್‌ಸಿಂಗರ ಪರಿಚಯವಾಗಿ ಅವರ ಸಲಹೆ ಮೇರೆಗೆ ಬಾಂಬ್ ತಯಾರಿಸಲು ಆಗ್ರಾಕ್ಕೆ ಬಂದರು. 8 ಏಪ್ರಿಲ್ 1929ರಲ್ಲಿ ಭಗತ್‌ಸಿಂಗ್ ಹಾಗೂ ಬಟುಕೇಶ್ವರದತ್ತರವರು ಕೇಂದ್ರೀಯ ಅಸೆಂಬ್ಲಿಯ ಒಳಗೆ ಬಾಂಬ್ ಎಸೆದದ್ದು ಜತಿನ್‌ರವರು ತಯಾರಿಸಿದ ಬಾಂಬೇ ಆಗಿತ್ತು.

14 ಜೂನ್ 1929ರಂದು 'ಲಾಹೋರ್ ಷಡ್‌ಯಂತ್ರ ಕೇಸ್'ಗಾಗಿ ಇವರನ್ನು ಬಂಧಿಸಲಾಯಿತು. ಹಲವು ಕ್ರಾಂತಿಕಾರಿಗಳ ಜೊತೆ ಕಾರಾಗೃಹದಲ್ಲಿದ್ದುಕೊಂಡು ಉಪವಾಸ ಸತ್ಯಾಗ್ರಹವನ್ನು (ಅನಶನ) ಪ್ರಾರಂಭಿಸಿದರು. ಆರೋಗ್ಯ ಹದಗೆಟ್ಟರೂ ಕೂಡಾ ಗುಳಿಗೆ – ಔಷಧ ತಿರಸ್ಕರಿಸಿದರು. ಬ್ರಿಟಿಷ್ ಸರಕಾರದ ಬಂಧನಮುಕ್ತಿ ಆದೇಶವನ್ನು ಪಾಲಿಸದೇ ತಿರಸ್ಕರಿಸಿದರು. ಬರಬರುತ್ತಾ ಇವರ ಧ್ವನಿ ಮತ್ತು ಕಣ್ಣುಗಳು ನಿಸ್ತೇಜವಾಗತೊಡಗಿದವು. ಈ ಸುದ್ದಿಯು ಹೊರ ಕ್ರಾಂತಿಕಾರರ ಕಿವಿಗೆ ಬಿದ್ದು ಸ್ಫೂರ್ತಿಯಾಯಿತು. ಕಾರಾಗೃಹದ ವೈದ್ಯರು ಹಾಗೂ ಪೋಲಿಸರ ನೆರವಿನಿಂದ ಒತ್ತಾಯದಿಂದ ಮೂಗಿನಲ್ಲಿ ರಬ್ಬರ್‌ನ ನಳಿಕೆ (ಪೈಪ್) ಯಿಂದ ಹಾಲನ್ನು ಕುಡಿಸುವ ಪ್ರಯತ್ನ ನಡೆಸಿದರು. ಜತಿನ್ ದಾ ಹಾಲನ್ನು ಹೊಟ್ಟೆಗೆ ಕಳುಹಿಸದೆ ಎದೆಯಲ್ಲಿಯೇ ಉಳಿಸಿಕೊಂಡು ಹೊರಬಿಡುತ್ತಿದ್ದರು. ಕಾರಾಗೃಹದಲ್ಲಿ ತನ್ನ ಸಹಪಾಠಿಗಳನ್ನು ಕುರಿತು– "ಈಗ ನಾನು ಅವರ ಕೈಗೊಂಬೆಯಾಗಲಾರೆ" ಎಂದು ಉದ್ಗರಿಸಿದರು. 13 ಸೆಪ್ಟೆಂಬರ್ 1929– ರಂದು 'ಲಾಹೋರ್' ಕಾರಾಗೃಹದಲ್ಲಿ 63 ದಿನಗಳ ಉಪವಾಸ ಸತ್ಯಾಗ್ರಹದ ಕೊನೆಯ ದಿನವಾಗಿತ್ತು. ತಮ್ಮನಾದ ಕಿರಣ ಹಾಗೂ ಗೆಳೆಯನಾದ ವಿಜಯಕುಮಾರ್ ಸಿಹ್ನಾರನ್ನು ಕುರಿತು 'ಏಕಲಾ ಚಲೋ ರೇ' ಗಾಯನವನ್ನು 'ವಂದೇ ಮಾತರಂ' ಗೀತೆಯನ್ನು ಹಾಡಲು ಹೇಳಿ, ಗೀತೆಯನ್ನು ಮುಂದುವರೆಸುವಂತೆ ಹೇಳಿ ಮಧ್ಯಾಹ್ನ 1 ಗಂಟೆ 5 ನಿಮಿಷದ ಹೊತ್ತಿಗೆ ಭಾರತ ಮಾತೆಯ ಮಡಿಲ ಸೇರಿ ವೀರಸ್ವರ್ಗವನ್ನು ಪಡೆದರು. ಅನಶನ್ ಸತ್ಯಾಗ್ರಹವನ್ನು ಒಪ್ಪಿ ಅಪ್ಪಿಕೊಂಡವರು. 'ಅನಶನ್' ಎಂದರೆ ಗೆಲುವು ಇಲ್ಲವೇ ಮರಣ" ಎಂದರ್ಥ.

ಜತಿನ್ ದಾರವರ ಪಾರ್ಥಿವ ಶರೀರವನ್ನು ರೈಲ್ವೆಯ ಮೂಲಕ, ಚಿಕ್ಕ ಸಹೋದರ ಕಲ್ಕತ್ತೆಗೆ ತೆಗೆದುಕೊಂಡು ಬಂದರು. ಬರುವ ದಾರಿಯಲ್ಲಿ ಸಾವಿರಾರು ದೇಶಾಭಿಮಾನಿಗಳು, ಕ್ರಾಂತ್ರಿಕಾರರು, ಶ್ರದ್ಧೆಯ ಕಂಬನಿಗಳನ್ನು ಸಲ್ಲಿಸಿದರು. ದೇಹ ಸಂಸ್ಕಾರದಲ್ಲಿ ಒಂದುವರೆ ಲಕ್ಷ ಅಭಿಮಾನಿಗಳು ಭಾಗವಹಿಸಿದ್ದರು. ನೇತಾಜಿ ಸುಭಾಷ್‌ಚಂದ್ರಭೋಸರು ಭಾವುಕರಾಗಿ ಅಂತಿಮ ನಮನ ಸಲ್ಲಿಸುತ್ತಾ "ಭಾರತದ ಯುವ ದಧೀಚಿ" ಎಂದು ಸಂಬೋಧಿಸಿದರು. ಸ್ವಾತಂತ್ರ್ಯ ಪಡೆದ ನಂತರ ಭಾರತ ಸರಕಾರ ಅವರ ನೆನಪಿಗಾಗಿ 'ಅಂಚೆ ಚೀಟಿ' ಲೋಕಾರ್ಪಣೆಗೊಳಿಸಿತು. ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಮತ್ತು ಬಲಿದಾನವನ್ನು ನಾವೆಲ್ಲಾ ಸ್ಮರಿಸುತ್ತಿರಬೇಕು. ನಮ್ಮದಿಯ ಜೀವನ ಅವರು ನಮಗೆ ಕೊಟ್ಟ ಬಳುವಳಿ. ದೇಶದ ಸ್ವಾತಂತ್ರ್ಯವನ್ನು, ಅಖಂಡತೆಯನ್ನು ಎತ್ತಿಹಿಡಿಯುವ ಕೈಂಕರ್ಯ ನಮ್ಮ ನಿಮ್ಮೆಲ್ಲರದಾಗಿರಲಿ. ಪಡೆದಿರುವ ಸ್ವಾತಂತ್ರ್ಯವನ್ನು ಜಾತಿ, ಮತ, ಭೇದವಿಲ್ಲದೆ ಉಳಿಸಿಕೊಂಡು ಹೋಗೋಣ. ದೇಶಭಕ್ತರಾಗಿ ಜೀವನವನ್ನು ಸವೆಸೋಣ. ದೇಶಕ್ಕೆ ಮಾದರಿಯಾಗೋಣ ಎಂಬುದು ಈ ಲೇಖನದ ಆಶಯ.

ಜೈ ಭಾರತಾಂಬೆ ●

# ಲಾಲ್ ಬಾಲ್ ಪಾಲ್ ಮತ್ತು ಬಂಕಿಮ ಚಂದ್ರರ ಕೊಡುಗೆ

**ಅಮೃತೋತ್ಸವದ ಸಂದರ್ಭದಲ್ಲಿ ಈ ಘಟನೆಗಳು ಎಲ್ಲರ ಸ್ಮರಣೆಗೆ ಬರಬೇಕು ಎಂಬ ಉದ್ದೇಶದಿಂದ ಈ ಲೇಖನಮಾಲೆ ಈ ಪುಟಗಳು ಸು. ರಾಮಣ್ಣನವರ ಸ್ವಾತಂತ್ರ್ಯ ಹೋರಾಟ ಪುಸ್ತಕದ ಒಂದು ಭಾಗ. ಇದು 3-4 ಕಂತುಗಳು ಬರುತ್ತದೆ**

■ ಶ್ರೀ ಸು. ರಾಮಣ್ಣ

(ಹಿಂದಿನ ಸಂಚಿಕೆಯಿಂದ...)

ಸ್ವಾತಂತ್ರ್ಯ ಹೋರಾಟದಲ್ಲಿ ನಿರ್ಣಾಯಕ ಭೂಮಿಕೆಯನ್ನು ನಿರ್ವಹಿಸಿದ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಹುಟ್ಟು ಹಾಗೂ ಬೆಳವಣಿಗೆಯ ಒಂದಷ್ಟು ಸಮೀಕ್ಷೆ ಮಾಡುವುದು ಅಗತ್ಯ. 1857ರ ಸಂಗ್ರಾಮದಲ್ಲಿ ಅನಿರೀಕ್ಷಿತ ಆಘಾತಕ್ಕೆ ಒಳಗಾದ ಬ್ರಿಟಿಷರು ಅನಂತರ ಎಚ್ಚರಿಕೆಯ ಹೆಜ್ಜೆ ಇಡುತ್ತಾ ಹೋದರು. ಭಾರತೀಯರಲ್ಲಿ ಕ್ರಮೇಣ ಏರುತ್ತಿದ್ದ ಅಸಂತೋಷದ ಪ್ರವಾಹವನ್ನು ನಿಯಂತ್ರಿಸಲೆಂದೇ 1885ರಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸನ್ನು ಬ್ರಿಟಿಷರೇ ಸ್ಥಾಪನೆ ಮಾಡಿಸಿದರು. ಆಂಗ್ಲ ಸರ್ಕಾರದಲ್ಲಿ ಅಧಿಕಾರಿಗಳಾಗಿದ್ದ ಎ.ಓ.ಹ್ಯೂಮ್ ಮತ್ತು ಸರ್ ವಿಲಿಯಂ ರಡರ್‌ಬರ್ನ್‌ರೇ ಕಾಂಗ್ರೆಸ್ಸಿನ ಜನ್ಮದಾತರು. ಈ ಕಾಂಗ್ರೆಸ್ಸಿನ ಭೂಮಿಕೆ ಭಾರತೀಯ ಅಸಂತೋಷದ ಪ್ರವಾಹಕ್ಕೆ ಒಂದು ಸುರಕ್ಷಾ ಕವಾಟದಂತೆ ಇತ್ತು (Safety valve). ವರ್ಷಕ್ಕೊಮ್ಮೆ ಅಧಿವೇಶನ ಸೇರುವುದು, ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಕೊಡುವುದು, ಸರ್ಕಾರವನ್ನು ಸ್ತುತಿಸಿ ಭಿಕ್ಷಾಟನೆಯ ರೂಪದಲ್ಲಿ ಒಂದೆರಡು ಬೇಡಿಕೆಗಳನ್ನು ಮಂಡಿಸುವುದು– ಇಷ್ಟೇ ಕಾಂಗ್ರೆಸ್ಸಿನ ಕಾರ್ಯಕಲಾಪ ಆಗಿತ್ತು. ಆಶ್ಚರ್ಯವೆಂದರೆ ದಾದಾಭಾಯಿ ನವರೋಜಿ ಹಾಗೂ ಸುರೇಂದ್ರನಾಥ ಬ್ಯಾನರ್ಜಿಯಂಥ ದಿಗ್ಗಜರೂ ಈ ಕಾಂಗ್ರೆಸ್ಸಿನಿಂದ ಮೋಹಿತರಾಗಿದ್ದರು.

ಆರಾಮ ಕುರ್ಚಿಯ ಮಾತಿನಮಲ್ಲರ ಸಂಸ್ಥೆಯಾಗಿದ್ದ ಕಾಂಗ್ರೆಸ್ಸನ್ನು ಸ್ವಾತಂತ್ರ್ಯ ಹೋರಾಟದ ಬಲವಾದ ಆಂದೋಲನವನ್ನಾಗಿ ಬದಲಾಯಿಸಿದವರು ಲೋಕಮಾನ್ಯ ಬಾಲಗಂಗಾಧರ ತಿಲಕ್. 1906ರಲ್ಲಿ ಕಾಂಗ್ರೆಸ್ಸಿನ ವೇದಿಕೆಯಿಂದಲೇ ತಿಲಕರು "ಸ್ವರಾಜ್ಯ ನಮ್ಮ ಜನ್ಮಸಿದ್ಧ ಹಕ್ಕು ಮತ್ತು ಇದನ್ನು ಪಡೆದೇ ತೀರುತ್ತೇವೆ" (Swaraj is our birth right and we shall have it) ಎಂದು ಗುಡುಗಿದರು. ಜತೆಗೆ ವಿದೇಶೀ ವಸ್ತುಗಳನ್ನು ಬಹಿಷ್ಕರಿಸಲು ಜನತೆಗೆ ಆಹ್ವಾನ ನೀಡಿದರು. ಛತ್ರಪತಿ ಶಿವಾಜಿ ಮಹಾರಾಜರ ಜನ್ಮದಿನ ಹಾಗೂ ಗಣೇಶ ಚೌತಿಯನ್ನು ರಾಷ್ಟ್ರೀಯ ಜನೋತ್ಸವವನ್ನಾಗಿ ಆಚರಿಸುವ ಹೊಸ ಪರಂಪರೆಯನ್ನು ಪ್ರಾರಂಭಿಸಿದರು. ಇದರಿಂದಾಗಿ ಜನತೆಯಲ್ಲಿ ಅಭೂತಪೂರ್ವ ಚೈತನ್ಯದ ಸಂಚಾರವಾಯಿತು. ಬಿಕ್ಷುಕನಂತಿದ್ದ ಕಾಂಗ್ರೆಸ್ ಹೋರಾಟದ ವೇದಿಕೆಯಾಗಿ ಹೋಯಿತು. ಬೆರಗಾಗಿ ಹೋದ ಬ್ರಿಟಿಷರು ತಿಲಕರನ್ನು "ಭಾರತದ ಅಸಂತೋಷದ ಜನಕ (The father of Indian unrest)" ಎಂದು ಕರೆದರು, ಮತ್ತು ಅವರನ್ನು 6 ವರ್ಷಗಳ ಕಾಲ ಮಂಡಾಲೆಯ ಸೆರೆಮನೆಯಲ್ಲಿಟ್ಟರು.

ಮಹಾರಾಷ್ಟ್ರದಲ್ಲಿ ತಿಲಕರು ನಿರ್ವಹಿಸಿದ ಕ್ಷಾತ್ರ ಭೂಮಿಕೆಯನ್ನು ಪಂಜಾಬಿನಲ್ಲಿ ಲಾಲಾ ಲಜಪತರಾಯ್ ಹಾಗೂ ಬಂಗಾಳದಲ್ಲಿ ಬಿಪಿನ್ ಚಂದ್ರಪಾಲ್ ಸಮರ್ಥವಾಗಿ ನಿರ್ವಹಿಸಿದರು. ನೋಡನೋಡುತ್ತಿದ್ದಂತೆ ಇಡೀ ದೇಶದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ರಭಸ ಬಂತು. ಈ ಮೂವರು ಲಾಲ್–ಬಾಲ್–ಪಾಲ್ ಎಂದು ಖ್ಯಾತನಾಮರಾಗಿ, ಹಲವಾರು ಕ್ರಾಂತ್ರಿಕಾರಿಗಳಿಗೆ ಪ್ರೇರಣಾಪುರುಷರೂ ಆದರು.

## ಬಂಗಾಳದಲ್ಲಿ ಪುಟಿದೆದ್ದ "ವಂದೇಮಾತರಂ" ರಾಷ್ಟ್ರಮಂತ್ರ

ಬಂಗಾಳದ ವರಕವಿ, ರಾಷ್ಟ್ರಭಕ್ತ ಬಂಕಿಮಚಂದ್ರರು 'ವಂದೇಮಾತರಂ' ಗೀತೆಯ ಜನಕ. ಲಕ್ಷ್ಮೀ, ದುರ್ಗಾ, ಸರಸ್ವತಿಯರ ತ್ರಿವೇಣಿ ಸಂಗಮವನ್ನು ಭಾರತಾಂಬೆಯಲ್ಲಿ ಕಂಡ ಬಂಕಿಮರು ತಾಯಿ ಭಾರತೀಯ ದೇಶಮಾತೆಗೆ ಸಮರ್ಪಿಸಿದರು. "ಬರಲಿರುವ ಇಪ್ಪತ್ತು ವರ್ಷಗಳಲ್ಲಿ 'ವಂದೇಮಾತರಂ' ಗೀತೆ ದೇಶಭಕ್ತಿಯ ಹುಚ್ಚು ಹಿಡಿಸಲಿದೆ" ಎಂಬ ಭವಿಷ್ಯವಾಣಿಯನ್ನು ಅವರೇ ನುಡಿದಿದ್ದರು. ಅವರ ಈ ಭವಿಷ್ಯವಾಣಿ 1905ರ ಹೊತ್ತಿಗೆ ಸತ್ಯವಾಯಿತು. ಆ ದಿನಗಳಲ್ಲಿ ವೈಸ್‌ರಾಯ್ ಆಗಿದ್ದ ಲಾರ್ಡ್ ಕರ್ಜನ್ ಬ್ರಿಟಿಷರ "ಒಡೆದು ಆಳುವ ನೀತಿ" (Divide and Rule) (Partition of Bengal act.) ಗೆ ಅನುಗುಣವಾಗಿ ಬಂಗಾಳವನ್ನು ಹಿಂದು ಬಹುಸಂಖ್ಯಾತ ಮತ್ತು ಮುಸ್ಲಿಂ ಬಹುಸಂಖ್ಯಾತ ಹೀಗೆ ಎರಡು ಭಾಗಗಳನ್ನಾಗಿ ಒಡೆಯುವ ಕಾನೂನು ಮಾಡಿದ (Partition of Bengal act.) ಅವನ ಈ ಕುಚೇಷ್ಟೆ ಜೇನುಗೂಡಿಗೆ ಕೈ ಹಚ್ಚಿದಂತಾಯಿತು. ನೋಡನೋಡುತ್ತಿದ್ದಂತೆ ಸಂಪೂರ್ಣ ಬಂಗಾಲ ಒಟ್ಟಾಗಿ ಈ ಕಾನೂನಿನ ವಿರುದ್ಧವಾಗಿ ಎದ್ದುನಿಂತಿತು. ಏಳು ವರ್ಷಗಳ ಕಾಲ ಸತತವಾಗಿ ಪ್ರಬಲವಾದ ಜನಾಂದೋಲನ ನಡೆಯಿತು. ಈ ಹೋರಾಟದ ರಣಮಂತ್ರವಾಗಿ ವಂದೇಮಾತರಂ ವಿಜೃಂಭಿಸಿತು. ಇದರ ಕಾವಿಗೆ ಆಂಗ್ಲ ಸರ್ಕಾರ ನಡುಗಿಹೋಯಿತು. ನಿರ್ವಾಹವಿಲ್ಲದೆ, 1912ರಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಚಕ್ರವರ್ತಿ ಪಂಚಮಜಾರ್ಜ್ ಲಂಡನ್‌ನಿಂದ ಕಲ್ಕತ್ತೆಗೆ ಧಾವಿಸಿ ಬಂದು ಬಂಗಾಲ ವಿಭಜನೆಯ ಕಾನೂನನ್ನು ಹಿಂತೆಗೆದು ಕೊಳ್ಳಬೇಕಾಯಿತು. ನಿಜಕ್ಕೂ ಸಂಪೂರ್ಣ ಭಾರತದಲ್ಲಿ ಸ್ವರಾಜ್ಯ ಚಳುವಳಿಯಲ್ಲಿ ನವಶಕ್ತಿಯ ಸಂಚಾರವಾದಂತಾಯಿತು.

## ಮಹಾತ್ಮಾ ಗಾಂಧೀಜಿಯ ನೇತೃತ್ವದಲ್ಲಿ ರಾಷ್ಟ್ರೀಯ ಜನಾಂದೋಳನ

ಈ ಹೊತ್ತಿಗೆ ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ ಆಂದೋಳನ ಮಾಡಿ ಪ್ರಖ್ಯಾತರಾಗಿದ್ದ ಮೋಹನ್‌ದಾಸ್ ಕರಮ್‌ಚಂದ್ ಗಾಂಧಿ ಭಾರತಕ್ಕೆ ಬಂದರು ಮತ್ತು ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮಿಕಿದರು.

ಗಾಂಧೀಜಿ ಹಾಗೂ ಅವರ ನೇತೃತ್ವದ ಕಾಂಗ್ರೆಸ್‌ನ ಅಹಿಂಸಾತ್ಮಕ ಚಳುವಳಿಯೇ ಭಾರತಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟಿತು ಎಂಬ ಪ್ರಚಾರ ಇಂದಿಗೂ ಮುಂದುವರಿದಿದೆಯಷ್ಟೇ, ಇದು ಗಾಂಧೀಜಿಯ ಮೂಲ ನಂಬಿಕೆಯಾಗಿದ್ದ ಸತ್ಯ ಮತ್ತು ಪ್ರಾಮಾಣಿಕತೆಗೆ ಮಾಡುವ ಅನ್ಯಾಯವಲ್ಲದೆ ಬೇರೇನೂ ಅಲ್ಲ. 1857 ರ ನಂತರ ಕ್ರಾಂತಿಕಾರಿ ಹೋರಾಟ, ಲಾಲ್, ಬಾಲ್, ಪಾಲ್ ಇವರ ಸಮರ್ಥ ನಾಯಕತ್ವ ಮತ್ತು ವಂದೇಮಾತರಂ ಚಳುವಳಿ ಇವೆಲ್ಲವುಗಳ ಪರಿಣಾಮವಾಗಿ ಭಾರತದಲ್ಲಿ ಒಂದು ಸಶಕ್ತ ಸ್ವಾತಂತ್ರ್ಯ ಹೋರಾಟದ ರಾಷ್ಟ್ರೀಯ ವೇದಿಕೆ ತಯಾರಾಗಿತ್ತು. ಇದರಲ್ಲಿ ಹಿಂದು ಮಹಾಸಭೆ, ಸಮಾಜವಾದಿಗಳು ಹಾಗೂ ವೈಯಕ್ತಿಕ ನೆಲೆಯಲ್ಲಿ ದೇಶದ ಸ್ವಾತಂತ್ರ್ಯವನ್ನು ಬಯಸಿದ್ದ ಜನಸಾಮಾನ್ಯರೂ ಪಾಲ್ಗೊಂಡಿದ್ದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಸ್ಥಾಪಕ ಡಾ॥ ಕೇಶವ ಬಲಿರಾಂ ಹೆಡಗೇವಾರ ಸಹ ಮುಂಚೂಣಿಯ ನಾಯಕರಲ್ಲೊಬ್ಬರು. ಒಟ್ಟಿನಲ್ಲಿ ಕಾಂಗ್ರೆಸ್ ಎಲ್ಲ ಸ್ವಾತಂತ್ರ್ಯ ಪ್ರೇಮಿಗಳ ಒಂದು ವೇದಿಕೆಯಾಗಿತ್ತೆಂಬುದನ್ನು ಮರೆಯಬಾರದು.

(ಮುಂದುವರೆಯುವುದು...)

# ಗೀತಾ ಜಯಂತಿ

**ಸರ್ವವೇದಮಯೀ ಗೀತಾ ಸರ್ವಧರ್ಮ ಮಯೋ ಮನುಃ ।**
**ಸರ್ವತೀರ್ಥಮಯಿ ಗಂಗಾ ಸರ್ವದೇವ ಮಯೋ ಹರಿಃ ॥**
**ಪಾದಾಸ್ಯಾಪ್ಯರ್ಧ ಪಾದಂ ವಾ ಶ್ಲೋಕಂ ಶ್ಲೋಕಾರ್ಧಮೇವ ವಾ।**
**ನಿತ್ಯಾಂ ಧಾರಯತೇ ಯಸ್ತು ಸ ಮೋಕ್ಷಮಧಿಗಚ್ಛತಿ ॥**

ಈ ಎಲ್ಲವೂ ಗೀತೆಯ ಮಹತ್ತ್ವವನ್ನು ತಿಳಿಸುತ್ತವೆ. ಗೀತೆಯು ಶಕ್ತಿಯ, ಜ್ಞಾನದ ಮೂಲ. ಆರು ಸಾವಿರ ವರ್ಷಗಳ ಹಿಂದೆ ದ್ವಾಪರಯುಗದಲ್ಲಿ ಕುರುಕ್ಷೇತ್ರ ಯುದ್ಧಭೂಮಿಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿದ ಈ ಜ್ಞಾನಭಂಡಾರ ಜೀವನದ ಸಂದೇಶ– ವೇದಾಂತದ, ಜ್ಞಾನದ ಉದಾತ್ತ ತತ್ವಗಳನ್ನು ಇದು ತಿಳಿಸುತ್ತದೆ. ಇಡೀ ಮಾನವಕೋಟಿಗೆ ಸಂಬಂಧಿಸಿದಂತೆ ದೇಶ, ವರ್ಗ, ಕಾಲಾತೀತ ವಿಚಾರಗಳ ಆಕರ. ಇದು ವಿಶ್ವವ್ಯಾಪಿಯಾದ ಸತ್ಯವನ್ನು ಒಳಗೊಂಡದ್ದು.

ಮಾರ್ಗಶಿರಮಾಸದ ಶುಕ್ಲಪಕ್ಷದ ಹನ್ನೊಂದನೆಯ ದಿನವೇ ಶ್ರೀಕೃಷ್ಣನು ಗೀತೆಯನ್ನು ಅರ್ಜುನನಿಗೆ ಬೋಧಿಸಿದ ದಿನವೆಂದು 'ಗೀತಾ ಜಯಂತಿ' ಯನ್ನು ಆಚರಿಸ ಲಾಗುತ್ತದೆ. ಸನಾತನ ಧರ್ಮವನ್ನು ಪಾಲಿಸುವ ಸಾವಿರಾರು ಭಕ್ತಾದಿಗಳಿಂದ ಪ್ರಪಂಚದಾದ್ಯಂತ ಇದರ ಆಚರಣೆ ನಡೆಯುತ್ತದೆ. ಇಡೀ ದಿನ ಗೀತಾಪಠಣ ಉಪವಾಸ, ಭಜನೆ ಇತ್ಯಾದಿ ನಡೆಯುತ್ತದೆ. ಗೀತೆಯ ಪುಸ್ತಕಗಳ ಉಚಿತ ವಿತರಣೆಯೂ ಇರುತ್ತದೆ. ಗೀತಾಜಯಂತಿಯು ದಿನ ಮೋಕ್ಷದ ಏಕಾದಶಿಯೂ ಇರುವುದರಿಂದ ಅನೇಕ ಭಕ್ತರು ಅಂದು ಉಪವಾಸವ್ರತವನ್ನು ಕೈಗೊಳ್ಳುತ್ತಾರೆ.

ಗೀತೆಯ ಮಹತ್ತ್ವವಿರುವುದು ಅದು ಪ್ರತಿಯೊಬ್ಬರನ್ನೂ ಚಿಂತನೆಯ ದಾರಿಗೆ ಹಚ್ಚುವುದರಲ್ಲಿ. ಬದುಕಿನ ನಾನಾ ಘಟ್ಟಗಳಲ್ಲಿ ಸೂಕ್ತ ನಿರ್ಧಾರಗಳನ್ನು ಮಾಡುವುದರಲ್ಲಿ. ಜೀವನವನ್ನು ಹೊಸದೃಷ್ಟಿಯಿಂದ ನೋಡುವಂತೆ ಮಾರ್ಗದರ್ಶನ ನೀಡುವುದರಲ್ಲಿ, ಸ್ವಂತಿಕೆಯನ್ನು ಕಾಪಾಡಿಕೊಳ್ಳುವುದರಲ್ಲಿ, ಒಟ್ಟಾರೆಯಾಗಿ ಗೀತೆಯು ವೈಚಾರಿಕತೆಯನ್ನು ಬೆಳೆಸಿಕೊಳ್ಳಲು ಸಹಕರಿಸುತ್ತದೆ. ಸಾವಿರಾರು ವರ್ಷಗಳ ಹಿಂದೆ ಗೀತಾಬೋಧನೆ ನಡೆಯಿತೆಂದು ತಿಳಿದಿರುವುದಾದರೂ ಅದರಲ್ಲಿ ಪ್ರಸ್ತಾಪಿಸಿರುವ ಪ್ರತಿಯೊಂದು ವಿಚಾರವೂ ಸಹ ಪ್ರಸ್ತುತಕ್ಕೆ ಅನ್ವಯ ವಾಗುವಂತೆಯೇ ಇದೆ. ಏಳುನೂರು ಶ್ಲೋಕಗಳಲ್ಲಿ ಹದಿನೆಂಟು ಅಧ್ಯಾಯಗಳಲ್ಲಿ ವಿವರಿಸಿರುವ ವಿಚಾರಗಳು ಕರ್ಮಯೋಗ, ಭಕ್ತಿಯೋಗ ಮತ್ತು ಜ್ಞಾನಯೋಗ ಎಂದು ಮೂರು ಬಗೆಗಳಲ್ಲಿ ಬದುಕಿನ ಧ್ಯೇಯವನ್ನು ತಿಳಿಸುತ್ತವೆ. ಕರ್ತವ್ಯವನ್ನು ತಿಳಿಸುತ್ತವೆ. ಉತ್ತಮ ನಡವಳಿಕೆಯನ್ನು ಕಲಿಯುವ ಬಗೆಯನ್ನು ಕಲಿಸುತ್ತವೆ.

"ಭಗವಂತನ ಗೀತೆ' ಎಂಬ ಅರ್ಥವನ್ನು ಹೊಂದಿರುವ ಈ ಗೀತೆಯಲ್ಲಿ ಜ್ಞಾನಯೋಗವು ಜೀವನದ ಅತ್ಯುಚ್ಛ ಸ್ಥಿತಿಯೆಂದೂ ಆದರೆ ಯಾರೊಬ್ಬರೂ ನೇರವಾಗಿ ಅದನ್ನು ತಲುಪುವುದು ಸಾಧ್ಯವಿಲ್ಲವೆಂದೂ ಉಳಿದೆರಡು ಹಂತಗಳನ್ನು ದಾಟಿದ ನಂತರವೇ ಆ ಹಂತಕ್ಕೆ ಏರಲು ಸಾಧ್ಯವೆಂದೂ ಹೇಳಿದೆ. ಹಾಗಾಗಿ ಪ್ರತಿಯೊಬ್ಬ ಮನುಷ್ಯನೂ ತನ್ನ ಪಾಲಿಗೆ ಬಂದ ಕರ್ತವ್ಯಗಳನ್ನು ನಿಷ್ಠೆಯಿಂದ ಪಾಲಿಸುವುದು ಎಷ್ಟು ಮುಖ್ಯವೋ ಅಷ್ಟೇ ಶ್ರದ್ಧೆಯೊಂದಿಗೆ ಪರಮಾತ್ಮ ತತ್ತ್ವವನ್ನು ಭಕ್ತಿಯೋಗದ ಮೂಲಕ ತಿಳಿಯುವ ಕಾರ್ಯಕ್ಕೆ ತೊಡಗ ಬೇಕೆಂದೂ ಅದರ ನಂತರವೇ ಮೂರನೆಯ ಹಾಗೂ ಪ್ರಬುದ್ಧತೆಯ 'ಜ್ಞಾನಯೋಗ' ವನ್ನು ಸಾಧಿಸಲು ಸಾಧ್ಯವಾಗುತ್ತದೆಂದು ತಿಳಿಸಿದೆ.



'ಗೀತಾಜಯಂತಿ'ಯನ್ನು ಭಾರತವಲ್ಲದೆ ಹಲವು ದೇಶಗಳಲ್ಲಿಯೂ ಆಚರಿಸುತ್ತಾರೆ. ಕೃಷ್ಣಪಂಥವನ್ನು ಸ್ವಾಮಿ ಪ್ರಭುಪಾದರು ಸ್ಥಾಪಿಸಿದ ನಂತರವಂತೂ ಅವರ ಅನುಯಾಯಿಗಳು ದೇಶದ ಹಾಗೂ ಹೊರದೇಶಗಳಲ್ಲಿಯೂ ಸಾವಿರಾರು ಮಂದಿ ಇರುವುದರಿಂದ ಗೀತಾಜಯಂತಿಯು ಸಂಭ್ರಮದಿಂದ ಎಲ್ಲ ಕಡೆಗಳಲ್ಲಿ ನಡೆಯುತ್ತದೆ. ಭಗವದ್ಗೀತೆಯ ಪಾರಾಯಣ, ವಿದ್ವಾಂಸರ ಜೊತೆಯಲ್ಲಿ ಅದರಲ್ಲಿರುವ ವಿಚಾರಗಳು, ಅವುಗಳ ಪ್ರಸ್ತುತತೆ, ಬದುಕಿನಲ್ಲಿ ಅಳವಡಿಸಿ ಕೊಳ್ಳಬೇಕಾದ ಅಗತ್ಯ ಎಲ್ಲದರ ಕುರಿತು ಚರ್ಚೆ ನಡೆಯುತ್ತದೆ. ಭಕ್ತಿ ಗೀತೆಗಳ ಗಾಯನವೂ ಇರುತ್ತದೆ. ಗೀತೆಯ ಸಂದೇಶಗಳನ್ನು ಮನನ ಮಾಡಿಕೊಳ್ಳುತ್ತ, ಆತ್ಮವಿಶ್ವಾಸ, ಆತ್ಮಬಲಗಳನ್ನು ವೃದ್ಧಿಸಿ ಕೊಳ್ಳುವ ಪ್ರಯತ್ನದೊಂದಿಗೆ ಜೀವನವನ್ನು ಹಸನು ಮಾಡಿಕೊಳ್ಳಲು ಸಿದ್ಧರಾಗುತ್ತಾರೆ.

**ಗೀತಾಶಾಸ್ತ್ರಮಿದಂ ಪುಣ್ಯಂ ಯಃ ಪಠೇತ್ಪ್ರಯತಃ ಪುಮಾನ್ ।**
**ವಿಷ್ಣೋಃ ಪದಮವಾಪ್ನೋತಿ ಭಯಶೋಕಾದಿವರ್ಜಿತಃ ॥**

•

# ರಾಜ್ಯ ಮಟ್ಟದ ಮಹಿಳಾ ಅಭ್ಯಾಸ ವರ್ಗದ ವರದಿ

**ಶ್ರೀಮತಿ ಸುಮಂಗಳ**
ಸಹಶಿಕ್ಷಕಿ, ಜಿಜೆಸಿ ಬಾಯ್ಸ್,
ರಾಮನಗರ ಜಿಲ್ಲೆ



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಮಹಿಳಾ ವಿಭಾಗದಿಂದ ಹಮ್ಮಿಕೊಂಡ ರಾಜ್ಯ ಮಟ್ಟದ ಮಹಿಳಾ ಅಭ್ಯಾಸ ವರ್ಗವು ಪಿರಮಿಡ್ ವ್ಯಾಲಿ, ಕೆಬ್ಬೆದೊಡ್ಡಿ, ಹಾರೋಹಳ್ಳಿ ಹೋಬಳಿ, ಕನಕಪುರ ತಾಲ್ಲೂಕಿನಲ್ಲಿ ದಿನಾಂಕ 30.10.2021 ಹಾಗೂ 31.10.2021ರಂದು ನಡೆಯಿತು.

ಅಭ್ಯಾಸ ವರ್ಗದ ಮೊದಲ ದಿನವಾದ 30.10.2021 ರಂದು ಹತ್ತು ಗಂಟೆಗೆ ಅಭ್ಯಾಸವರ್ಗಕ್ಕೆ ನೋಂದಣಿ ಕಾರ್ಯ ಆರಂಭವಾಯಿತು. ರಾಜ್ಯದ ವಿವಿಧೆಡೆಯಿಂದ ಆಗಮಿಸಿದ ಶಿಕ್ಷಕಿಯರು ನೋಂದಾವಣೆ ಮಾಡಿಕೊಂಡು ಅಭ್ಯಾಸವರ್ಗಕ್ಕೆ ಹಾಜರಾದುದು ಶುಭಾರಂಭ ಎನಿಸಿತು.

ಮಾಜಿ ವಿಧಾನಪರಿಷತ್ ಸದಸ್ಯರು, ಎಬಿಆರ್‌ಎಸ್‌ಎಮ್‌ನ ದಕ್ಷಿಣ ಮಧ್ಯ ಕ್ಷೇತ್ರಿಯ ಪ್ರಮುಖರಾದ  ಹಾಗೂ ಸಂಘದ ಹಿರಿಯರಾದ ಬಾಲಕೃಷ್ಣಭಟ್‌ರವರು, ವಿಧಾನಪರಿಷತ್ ಸದಸ್ಯರಾದ ಶ್ರೀ ಶಶೀಲ್ ನಮೋಶಿಯವರು, ಕನಕಪುರ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ಜಯಲಕ್ಷ್ಮಿಯವರು, ಅಕ್ಷರದಾಸೋಹದ ಮುಖ್ಯಸ್ಥರಾದ ಸವಿತಾರವರು, ಕ.ರಾ.ಮಾ.ಶಿ.ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಯುತ ಚಿದಾನಂದ ಪಾಟೀಲ್‌ರು, ಎಬಿಆರ್‌ಎಸ್‌ಎಮ್‌ನ ಮಹಿಳಾ ವಿಭಾಗದ ಕಾರ್ಯದರ್ಶಿಗಳಾದ ಶ್ರೀಮತಿ ಮಮತಾ ಡಿ.ಕೆಯವರು, ರಾಜ್ಯ ಮಹಿಳಾ ಪ್ರಮುಖರಾದ ಶ್ರೀಮತಿ ವಾಸುಕಿಯವರ ನೇತೃತ್ವದಲ್ಲಿ ಉದ್ಘಾಟನಾ ಸಮಾರಂಭ ಸುಸೂತ್ರವಾಗಿ ನೆರವೇರಿತು. ಶ್ರೀಮತಿ ರೋಹಿಣಿಯವರ ಪ್ರಾರ್ಥನೆ, ಶ್ರೀಮತಿ ಶರಣಮ್ಮನವರ ಸ್ವಾಗತ ಎಲ್ಲವೂ ಅಚ್ಚುಕಟ್ಟಾಗಿತ್ತು.

ಮೊದಲ ಅವಧಿಗೆ ವೇದಿಕೆ "ವೈಚಾರಿಕ ಅಧಿಷ್ಠಾನ" ಎಂಬ ವಿಷಯಕ್ಕೆ ಸಾಕ್ಷಿಯಾಯಿತು. ಶ್ರೀ ಕೆ ಬಾಲಕೃಷ್ಣಭಟ್, ಎಬಿಆರ್‌ಎಸ್‌ಎಮ್‌ನ ದಕ್ಷಿಣ ಮಧ್ಯ ಕ್ಷೇತ್ರೀಯ ಪ್ರಮುಖರು ಸಂಘಟನೆಗೆ ಬೇಕಾದ ವೈಚಾರಿಕ ಹಿನ್ನೆಲೆ ವಿವರಿಸುತ್ತಾ, ಸಮಾಜ, ಕುಟುಂಬ, ಆರ್ಥಿಕ ಸ್ಥಿತಿಗತಿ, ಬ್ರಿಟಿಷ್ ಶಿಕ್ಷಣದ ಬಗ್ಗೆ ಬೆಳಕು ಚೆಲ್ಲುತ್ತಾ " ಶಿಕ್ಷಣ ಎಂಬುದು ಮಾಹಿತಿ ಭರಿತ ಸಂಸ್ಕಾರ" ಎಂದು ತಮ್ಮ ಭಾಷಣದಲ್ಲಿ ತಿಳಿಸಿದರು. ನಂತರ ಊಟ ಮತ್ತು ವಿಶ್ರಾಂತಿ ಪಡೆಯಲಾಯಿತು. ಅಭ್ಯಾಸವರ್ಗದ ಪ್ರಾರ್ಥನಾಗೀತೆ "ಧರೆಗವತರಿಸಿದ ಸ್ವರ್ಗದ..." ಎಂಬ ಗೀತೆ 2ನೇ ಅವಧಿಗೆ ನಮ್ಮನ್ನು ಅಣಿಗೊಳಿಸಿತು. ವಿಜ್ಞಾನ ವೇದಗುರುಕುಲದ ಸಂಸ್ಥಾಪಕರು ಮತ್ತು ಸಂಸ್ಕೃತಿ ಚಿಂತಕರಾದ ಶ್ರೀಯುತ ರಾಮಚಂದ್ರ ಭಟ್ ಕೋಟೆಮನೆಯವರು ತಮ್ಮ ಅಗಾಧ ಪಾಂಡಿತ್ಯವನ್ನು ಶಿಕ್ಷಕರೆದುರು ತೆರೆದಿಟ್ಟರು. ಕವಿ ಬೇಂದ್ರೆಯವರ ರೂಪು ಹೋಲುತ್ತಿದ್ದ ಅವರು ಸೂಜಿಗಲ್ಲಿನಂತೆ ಜ್ಞಾನಪರಂಪರೆಯಲ್ಲಿ ಮಹಿಳೆಯರ ಸ್ಥಾನಮಾನದ ಬಗ್ಗೆ  ಹಾಗೂ ಮಹಿಳಾಪರ ನಿಲುವುಗಳಿಗೆ ನೀಡಿದ ತಾರ್ಕಿಕ ಉತ್ತರ ಎಲ್ಲರನ್ನು ತಬ್ಬಿಬ್ಬಾಗಿಸಿದವು. ತಿರುಚಿಹಾಕಲಾದ ಅದೆಷ್ಟೋ ಇತಿಹಾಸದ ಸಾಲುಗಳನ್ನು ನೆನಪು ಮಾಡುವುದೇ ಅಲ್ಲದೇ ವೇದ, ಉಪನಿಷತ್‌ಗಳಲ್ಲಿನ ಮಹಿಳೆಯರ ಬಗೆಗಿನ ಉಲ್ಲೇಖಗಳು, ಶ್ಲೋಕ, ಸಿದ್ಧಾಂತಗಳನ್ನು ಪರಿಚಯಿಸುವುದೇ ಅಲ್ಲದೇ, ಸಂವಾದದಲ್ಲಿಯೂ ಸರಿಯಾದ ಅರ್ಥಗರ್ಭಿತ ಉತ್ತರ ನೀಡಿ ಪ್ರಮುಖ ಸತ್ಯಾಂಶಗಳನ್ನು ಬಿಚ್ಚಿಟ್ಟರು. ಈ ಉಪನ್ಯಾಸದಲ್ಲಿ ನಾರೀಶಕ್ತಿಯ ವಿವಿಧ ಮುಖಗಳನ್ನು ಪರಿಚಯಿಸಿದರು. ವೇದಿಕೆಯಲ್ಲಿ ಉಪನ್ಯಾಸಕರ ಜೊತೆಗೆ ಶ್ರೀಮತಿ ಮಮತಾ ಡಿ.ಕೆಯವರು ಅಧ್ಯಕ್ಷರಾಗಿ ವೇದಿಕೆಯನ್ನು ಹಂಚಿಕೊಂಡರು. ಶ್ರೀಮತಿ ಸುಮಂಗಳಾರವರು ವಂದಿಸಿದರು.

ಅಲ್ಪ ಉಪಾಹಾರ ಹಾಗೂ ಚಹ ನಂತರ ಮತ್ತೊಂದು ಅವಧಿ 75ನೇ ಸ್ವಾತಂತ್ರ ಅಮೃತ ಮಹೋತ್ಸವದ ಆಚರಣೆಯ ಹಿಂದಿನ ಹೋರಾಟ ಸಾಗಿ ಬಂದ ಹೆಜ್ಜೆ ಗುರುತುಗಳ ಬಗ್ಗೆ ತಿಳಿಸಿಕೊಡಲು ಬಂದ ಶ್ರೀಯುತ ದತ್ತಾತ್ರೇಯ ವಜ್ರಳ್ಳಿಯವರನ್ನು ಹುಬ್ಬಳ್ಳಿಯ ಶ್ರೀಮತಿ ಯಶೋಧಾರವರು ಕಬೀರರ ದೋಹೆಯ ಉದಾಹರಣೆಯೊಂದಿಗೆ ಸ್ವಾಗತಿಸಿದರು. ಭಾರತದ ಅಖಂಡತೆ, ರಾಷ್ಟ್ರೀಯತೆ, ನಮ್ಮ  ನಡುವಿನ ವೈಫಲ್ಯಗಳು, ಸ್ವಾತಂತ್ರ ಪೂರ್ವದ ದೀರ್ಘವಾದ ಸಂಘರ್ಷಗಳನ್ನು ಎಳೆ-ಎಳೆಯಾಗಿ ಬಿಚ್ಚಿಟ್ಟು, ಎಲ್ಲರನ್ನು ಮಂತ್ರಮುಗ್ಧರನ್ನಾಗಿಸಿದರು. ಅವರ ಆ ಭಾಷಣ ಯಾವುದೇ ಕೃತಿಯನ್ನು ಸರಿಗಟ್ಟಬಲ್ಲದಾಗಿತ್ತು ಎಂದರೆ ಅತಿಶಯೋಕ್ತಿಯಾಗಲಾರದು. ವಿವಿಧ ದಂಗೆಗಳು ಹೇಗೆ ನಮ್ಮವರಿಂದಲೇ ವೈಫಲ್ಯ ಕಂಡವು. ವಿವಿಧ ನಾಗರೀಕತೆಯಲ್ಲಿನ ಒಳ ವಿಷಯಗಳು, ತಿರುಚಿ ಹಾಕಲಾದ ವಿಷಯಗಳು, ವೀರವನಿತೆಯರ ಜೀವನ, ಇತಿಹಾಸ ಹೀಗೆ ವಿಷಯದ ಆಳವಿತ್ತು.

15 ನಿಮಿಷ ಬಿಡುವಿನ ನಂತರ 4ನೇ ಅವಧಿಯಲ್ಲಿ ಶ್ರೀಮತಿ ಪಾರ್ವತಿಯವರು ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಸಾಧಕ-ಬಾಧಕಗಳು, ನಿಯಮಗಳು, ವಿದ್ಯಾರ್ಥಿ ಕಲಿಕಾ-ಬೋಧನೆಯ ವಿವಿಧ ಹಂತಗಳ ಬಗ್ಗೆ ಶಿಕ್ಷಣ ನೀತಿ ಹೇಳುವುದೇನು? ಎಂಬುದನ್ನು ಪಿಪಿಟಿ ಮೂಲಕ ವಿವರಣೆ ನೀಡಿದರು. ಸಂಜೆ 7.15 ಸಮೀಪಿಸಿದ ಪರಿಣಾಮ ರಾತ್ರಿ ಊಟಕ್ಕೆ ಹೋಗಲು ಶಿಬಿರಾರ್ಥಿಗಳಿಗೆ ಸೂಚಿಸಲಾಯಿತು. ಊಟದ ನಂತರ ರಾತ್ರಿ 8.30 ರಿಂದ ಸಾಂಸ್ಕೃತಿಕ ಚಟುವಟಿಕೆಗಳು ಆರಂಭವಾದವು. ಶಿಕ್ಷಕಿಯರು ಉತ್ಸಾಹದಿಂದ ತಮ್ಮ ಮಾನಸಿಕ ಆಯಾಸದಿಂದ ಹೊರಬಂದು ಬೇಯಿಸಿದ ಕಡಲೆಕಾಯಿಯನ್ನು ಸವಿಯುತ್ತಾ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

31.10.2021 ರಂದು ಬೆಳಿಗ್ಗೆ 5.30 ಕ್ಕೆ ಎಲ್ಲರೂ ನಿತ್ಯಕರ್ಮ ಮುಗಿಸಿ, ಪಿರಮಿಡ್ ವ್ಯಾಲಿಯ ಧ್ಯಾನಕೇಂದ್ರಕ್ಕೆ ಹಾಜರಾದೆವು. ಒಂದು ಗಂಟೆಯ ಧ್ಯಾನದ ಬಳಿಕ ಡಾ॥ ಗಿರಿಸ್ವಾಮಿಯವರಿಂದ ಆರೋಗ್ಯ, ಯೋಗದ ಮಹತ್ವ ಕುರಿತ ಉಪನ್ಯಾಸ ಆಲಿಸಿದೆವು. ನಮ್ಮೆಲ್ಲರಿಗೂ ಉಪಯುಕ್ತ ಮಾಹಿತಿಯನ್ನು ಶ್ರೀಯುತರು ನೀಡಿದರು. ನಂತರ ಬೆಳಗಿನ ಉಪಹಾರವನ್ನು ಸವಿದು, ಅಭ್ಯಾಸವರ್ಗಕ್ಕೆ 9 ಗಂಟೆಯ ದಿನದ ಮೊದಲನೇ ಅವಧಿಗೆ ಹಾಜರಾದೆವು. ಶ್ರೀಮತಿ ರೋಹಿಣಿಯವರ ಸರಸ್ವತಿವಂದನೆಯೊಂದಿಗೆ ಅವಧಿ ಪ್ರಾರಂಭವಾಯಿತು. ಮಹಿಳಾ ಪ್ರಮುಖರಾದ ಶ್ರೀಮತಿ ವಾಸುಕಿಯವರು ಅತಿಥಿ ಮಹೋದಯರನ್ನು ಸ್ವಾಗತಿಸಿದರು. ವೇದಿಕೆಯಲ್ಲಿ ಎಬಿಆರ್‌ಎಸ್‌ಎಮ್‌ನ ಪ್ರಧಾನ ಕಾರ್ಯದರ್ಶಿಗಳಾ ಶ್ರೀ ಶಿವಾನಂದ ಸಿಂಧನಕೇರಾರವರು ಸಂಘದ ವತಿಯಿಂದ ರಾಜ್ಯಾದಾದ್ಯಂತ ನಡೆಯುವ ಕಾರ್ಯ ಚಟುವಟಿಕೆಗಳ ಮಾಹಿತಿಯನ್ನು ನೀಡಿದರು. ಸಂಘವು ವರ್ಷದಲ್ಲಿ ನಡೆಸುವ ಪ್ರಮುಖ 4 ಕಾರ್ಯಕ್ರಮಗಳ ಬಗ್ಗೆ ತಿಳಿಸಿದರು. ಅಮೃತ ಮಹೋತ್ಸವದ ಸವಿನೆನಪಿನಲ್ಲಿ ಸಂಘವು ಕೈಗೆತ್ತಿಕೊಂಡಿರುವ 75  ಶಾಲೆಗಳ ಜೀರ್ಣೋದ್ಧಾರ, "ನನ್ನ ಶಾಲೆ-ನನ್ನ ತೀರ್ಥಕ್ಷೇತ್ರ" ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿದರು.  ಚಹಾವಿರಾಮದ ನಂತರ 6ನೇ ಅವಧಿ ಆರಂಭವಾಯಿತು. ಮೊದಲನೇ ಅವಧಿಯಿಂದ 5ನೇ ಅವಧಿಯ ಅವಲೋಕನದಲ್ಲಿ ಶ್ರೀಯುತ ಶಿವಾನಂದ ಸಿಂಧನಕೇರಾ, ಶ್ರೀ ಜೆ.ಎಮ್.

ಪುಟ 9 ಕ್ಕೆ ➢

# ಮಹಿಳಾ ಅಭ್ಯಾಸವರ್ಗ ಕಾರ್ಯಕ್ರಮ ಕುರಿತು ಅಭಿಪ್ರಾಯ



ಮಹಿಳಾ ಅಭ್ಯಾಸವರ್ಗ ಕಾರ್ಯಕ್ರಮವು ಒಂದು ಸುಂದರವಾದ ಕಾರ್ಯಕ್ರಮವಾಗಿತ್ತು. ಕಾರ್ಯಕ್ರಮವನ್ನು ಕ್ರಮಬದ್ಧವಾಗಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ನಾವು ಹೊಸ ಹೊಸ ವಿಷಯಗಳನ್ನು ತಿಳಿದುಕೊಂಡೆವು. ಅದರಲ್ಲಿಯೂ ಪಿರಮಿಡ್ ವ್ಯಾಲಿಯಂತಹ ಜಾಗದಲ್ಲಿ ಹಮ್ಮಿಕೊಂಡಿದ್ದು, ಹೊಸದೊಂದು ಕಳೆಯನ್ನು ತಂದುಕೊಟ್ಟಿತ್ತು. ಎರಡು ದಿವಸದ ಈ ಕಾರ್ಯಕ್ರಮವು ನಮ್ಮನ್ನು ಬೇರೆಯ ಲೋಕಕ್ಕೆ ಕರೆದು ಕೊಂಡು ಹೋದ ಅನುಭವ ನನಗಂತು ಆಯಿತು. ನಮ್ಮ ಕೆಲಸಗಳ ಒತ್ತಡದಿಂದ ಆ ಎರಡು ದಿನ ಶಾಂತವಾಗಿ ಕಳೆದು ಹಲವು ಹೊಸ ವಿಷಯಗಳನ್ನು ಹೊತ್ತು ತಂದೆವು. ಇಂತಹ ಕಾರ್ಯಕ್ರಮಗಳು ಇನ್ನು ಹೆಚ್ಚು ಹೆಚ್ಚು ನಡೆಯಲಿ ಎಂದು ಬೇಡಿಕೊಳ್ಳುತ್ತಾ ನನ್ನ ಈ ಬರವಣಿಗೆಯನ್ನು ಮುಗಿಸುತ್ತೇನೆ. ಧನ್ಯವಾದಗಳೊಂದಿಗೆ,

**ಸೀತಾ ಭಟ್,** ಕನ್ನಡ ಸ.ಶಿ, ಆರ್ಚಿಡ್ ಇಂಟರ್‌ನ್ಯಾಷನಲ್ ಸ್ಕೂಲ್, ವಿವೇಕಾನಂದ ಸಹಕಾರನಗರ, ಬೆಂಗಳೂರು

---



ರಾಮನಗರ ಜಿಲ್ಲೆ ಮಹಿಳಾ ಅಭ್ಯಾಸವರ್ಗ ಕಾರ್ಯಕ್ರಮದಲ್ಲಿ ಹಸಿರು ತಾಣಗಳ ಮಧ್ಯೆ ನಡೆದ ಸುಂದರ ಕಾರ್ಯಕ್ರಮವಾಗಿತ್ತು. ನನಗೆ ಈ ಕಾರ್ಯಕ್ರಮ ನಮಗೆ ಸಿಕ್ಕಿದ್ದು ನಮ್ಮ ಅವಕಾಶ, ಈ ಕಾರ್ಯಕ್ರಮದಲ್ಲಿ ನಾನು ಭಾಗವಹಿಸಿ ಹೊಸ ಅನುಭವವನ್ನು ಪಡೆದುಕೊಂಡೆ ಎನ್ನುವುದು ನನ್ನ ಅನಿಸಿಕೆ. ಈ ಎರಡೂ ದಿನದ ಕಾರ್ಯಕ್ರಮದಲ್ಲಿ ನಾನು ಭಾಗವಹಿಸಿ ಹೊಸ ಅನುಭವವನ್ನು ಪಡೆದುಕೊಂಡೆ ಎನ್ನುವುದು ನನ್ನ ಅನಿಸಿಕೆ. ಈ ಎರಡೂ ದಿನದ ಕಾರ್ಯಕ್ರಮದಲ್ಲಿ ಬೇರೆ ಜಿಲ್ಲೆಗಳ ಶಿಕ್ಷಕಿಯರ ಸ್ನೇಹ ಸಿಕ್ಕಿತು ಮತ್ತು ಅದರಲ್ಲಿರುವ ಪ್ರತಿಭೆ ಹೊರ ಬರುವುದಕ್ಕೆ ಸಾಂಸ್ಕೃತಿಕ ವೇದಿಕೆ ಕೊಟ್ಟಿದ್ದೀರಾ. ಅದು ನನಗೆ ತುಂಬಾ ಖುಷಿ ತಂದಿತು. ಈ ದೇಹದಿಂದ ದೂರನಾದೆ ಏಕೆ ಆತ್ಮವೇ ಆ ಮನರಂಜನೆ ಕಾರ್ಯಕ್ರಮವು ಶ್ರೀಯುತ ವೃಷಭೇಂದ್ರ ಸರ್ ಮಾಡಿದ್ದು ತುಂಬಾ ಚೆನ್ನಾಗಿ ಮೂಡಿಬಂದಿತು. ಪಿರಮಿಡ್ ಜ್ಞಾನಕ್ಕೆ ಹೋದಾಗ ಆದ ಅನುಭವ ಚೆನ್ನಾಗಿತ್ತು. ಈ ಮಹಿಳಾ ಅಭ್ಯಾಸವರ್ಗ ಕಾರ್ಯಕ್ರಮ ಹೊಸ ಲೋಕಕ್ಕೆ ಕರೆದುಕೊಂಡು ಹೋದಂತೆ ನನಗೆ ಅನುಭವವಾಯಿತು. ಇಂತಹ ಕಾರ್ಯಕ್ರಮ ಹೆಚ್ಚು ಹೆಚ್ಚು ಮೂಡಿಬರಲಿ ಎಂದು ನನ್ನ ಬರವಣಿಗೆ ಮುಗಿಸುತ್ತೇನೆ ಧನ್ಯವಾದಗಳು.

**ಸಾಕಮ್ಮ,** ರಾಮನಗರ

---



ಎಲ್ಲರಿಗೂ ನಮಸ್ಕಾರಗಳು. ಮಹಿಳಾ ಅಭ್ಯಾಸವರ್ಗದ ಬಗ್ಗೆ ಹೇಳಲು ಪದಗಳೇ ಸಾಲದು. ಅಚ್ಚುಕಟ್ಟಾದ ಹಚ್ಚ ಹಸಿರಿನ ಧ್ಯಾನ ತಾಣದಲ್ಲಿ 2 ದಿನ ಕಳೆದದ್ದೆ ಗೊತ್ತಾಗಲಿಲ್ಲ. ಕಾರ್ಯಕ್ರಮದ ಆಯೋಜಕರಿಗೆ ಕೋಟಿ ನಮನ. ದೂರದ ಯಾದಗಿರಿಯಿಂದ ನಾವು ಬಂದಿದ್ದೇವೆ, ಹೇಗಿರುತ್ತೇನೋ ಅನ್ಕೊಂಡಿದ್ದೆ. ಆದರೆ ಚೈತನ್ಯಯುತ ಅಭ್ಯಾಸದಿಂದ ನಾನು ಹೋಗದಿದ್ದರೆ, ಜೀವನದಲ್ಲಿ ಒಂದು ಸದಾವಕಾಶ ಕಳೆದುಕೊಳ್ಳುತ್ತಿದ್ದೆ ಅನಿಸಿತು. ಚಿದಾನಂದ ಸರ್ ರವರ ಸಮಯಪಾಲನೆ, ಅಚ್ಚುಕಟ್ಟಾದ ನಿರೂಪಣೆ, ಅದ್ಭುತ ಉಪನ್ಯಾಸ, ರುಚಿಕಟ್ಟಾದ ಊಟ ಮತ್ತು ಸ್ನ್ಯಾಕ್ಸ ಹೇಳ್ತಾ ಹೋದರೆ ಉಪಚಾರದ ಪಟ್ಟಿ ತುಂಬಾ ದೊಡ್ಡದಾಗುತ್ತದೆ. ಒಟ್ಟಿನಲ್ಲಿ ಪ್ರತಿಯೊಂದನ್ನು ಕಲಿತು ಬಂದಿದ್ದೇವೆ. ಆಯೋಜಿಸಿದ ಎಲ್ಲರಿಗೂ ಕೋಟಿ ಕೋಟಿ ನಮನಗಳು. ಧನ್ಯವಾದಗಳೊಂದಿಗೆ.

**ಶ್ರೀಮತಿ ಅನುಸೂಯ,** ಯಾದಗಿರಿ

---



ಕನಕಪುರ ತಾಲೂಕಿನ ಹಾರೋಹಳ್ಳಿಯ ಅಂತರಾಷ್ಟ್ರೀಯ ಧ್ಯಾನಕೇಂದ್ರದ ಪಿರಮಿಡ್ ವ್ಯಾಲಿಯಲ್ಲಿ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಮಹಿಳಾ ವಿಭಾಗವು ಮಹಿಳೆಯರಿಗೋಸ್ಕರ ಒಂದು ರಾಜ್ಯಮಟ್ಟದ ಮಹಿಳಾ ಅಭ್ಯಾಸವರ್ಗ ಎನ್ನುವ ಎರಡು ದಿನದ ಕಾರ್ಯಕ್ರಮ ಆಯೋಜಿಸಿದರು. ಅವರಿಗೆ ಮೊದಲು ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ, ಏಕೆಂದರೆ ನಮಗೆ ಬಹಳಷ್ಟು ಗೊತ್ತಿಲ್ಲದ ಬೇರೆ ಬೇರೆ ವಿಷಯದ ಬಗ್ಗೆ ತಿಳಿದುಕೊಳ್ಳಲು ಅವಕಾಶ ಒದಗಿಸಿ ಕೊಟ್ಟಿದ್ದಾರೆ. ಈ ಎರಡು ದಿವಸದ ಕಾರ್ಯಕ್ರಮ 20 ದಿವಸದ ಅನುಭವ ಕೊಟ್ಟಿದೆ ಎಂದರೆ ತಪ್ಪಾಗದು. ಅಥಣಿಯಿಂದ ಹೋಗಿದ್ದಕ್ಕೂ ಸಾರ್ಥಕವೆನಿಸಿತು. ಒಳ್ಳೆಯ ಉಪನ್ಯಾಸ, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾದ ಉಪಚಾರ. ಶಿಕ್ಷಣ ಕ್ಷೇತ್ರದಲ್ಲಿ ಶೇ. 65% ರಷ್ಟು ಮಹಿಳೆಯರೇ ಇರುವುದು ಹೆಮ್ಮೆಯ ವಿಷಯ. ಎಲ್ಲಾ ಜಿಲ್ಲೆಯ ಎಲ್ಲ ಸಹೋದರಿಯರ ಪರಿಚಯವಾಯಿತು. ಒಟ್ಟಾರೆ ಹೇಳಬೇಕೆಂದರೆ ನನಗೆ ಇದೊಂದು ಸುವರ್ಣಾವಕಾಶ ಅಂತ ಹೇಳಿದರೆ ತಪ್ಪಾಗದು. ಇನ್ನು ಇಂತಹ ಹೆಚ್ಚು ಹೆಚ್ಚು ಮಹಿಳಾಪರ ಕಾರ್ಯಕ್ರಮಗಳನ್ನು ಸಂಘಟನೆ ಮಾಡಲಿ ಅಂತ ಕೇಳಿಕೊಳ್ಳುತ್ತೇನೆ. ಧನ್ಯವಾದಗಳು.

**ಭಾರತಿ ಕೋರೆ,** ಅಥಣಿ, ಬೆಳಗಾವಿ

---



ನನಗೆ ಎರಡು ದಿನ ಅಭ್ಯಾಸವರ್ಗದಿಂದ ಆದ ಅನುಭವ ಜೀವನದಲ್ಲಿ ನನ್ನ ಪಾತ್ರವೇನು? ಎಂದು ತಿಳಿಯಿತು. ಮೊದಲ ದಿನ ರಾಮಚಂದ್ರ ಕೋಟೆಯವರಿಂದ "ಭಾರತೀಯ ಜ್ಞಾನ ಪರಂಪರೆಯಲ್ಲಿ ಮಹಿಳೆ" ಎನ್ನುವ ವಿಷಯ ಅರ್ಥಗರ್ಭಿತವಾಗಿತ್ತು. ಅವರನ್ನು ನೋಡಿದಾಗ ಮತ್ತು ವಿಷಯದ ಆಳವನ್ನು ತಿಳಿದಿದ್ದ ಅವರನ್ನು ನೋಡಿ " ಮೂರ್ತಿ ಚಿಕ್ಕದಾದರೂ, ಕೀರ್ತಿ ದೊಡ್ಡದು" ಎಂಬುವ ಮಾತು ನೆನಪಿಗೆ ಬಂತು. ದತ್ತಾತ್ರೇಯ ವಜ್ರಹಳ್ಳಿ "ಸ್ವಾತ್ರಂತ್ರ್ಯೋತ್ಸವದ ಅಮೃತ ಮಹೋತ್ಸವ" ವಿಷಯದಲ್ಲಿ ಸ್ವಾತಂತ್ರ್ಯದಲ್ಲಿ ಹೋರಾಟ ಮಾಡಿದವರ ಪಟ್ಟಿಯನ್ನೇ ನೀಡಿದರು. ನಿಜವಾಗಿಯೂ ನಾವು ಪಠ್ಯದಲ್ಲಿ ಎಲ್ಲೂ ಓದಲಾರದ ವಿಷಯಗಳನ್ನು ಬಹಳ ವಿವರವಾಗಿ ಹೇಳಿದರು. ಒಂದು ಸೂಜಿ ಬಿದ್ದರು ಕೇಳಿಸುವಷ್ಟು ನಿಶ್ಯಬ್ಧತೆ ಅಲ್ಲಿತ್ತು. ಅಷ್ಟು ಏಕಾಗ್ರತೆಯಿಂದು ಎಲ್ಲ ಶಿಕ್ಷಕಿಯರು ಕುಳಿತಿದ್ದರು. ತೇಜಸ್ವಿನಿ ಅನಂತಕುಮಾರ್‌ರವರಿಂದ ಮಹಿಳೆಯರು ಪರಿಸರ ಸಂರಕ್ಷಣೆಯಲ್ಲಿ ತಮ್ಮ ಪಾತ್ರವನ್ನು ಹೇಗೆ ನಿಭಾಯಿಸಬಹುದೆಂಬುದನ್ನು ತಿಳಿದುಕೊಂಡೆವು. ಅಡುಗೆಮನೆಯಲ್ಲಿ ಒಂದು ಪ್ಲಾಸ್ಟಿಕ್ ಕವರ್‌ನ್ನು ಕತ್ತರಿಸುವ ರೀತಿಯಿಂದಲೂ ನಾವು ಹೇಗೆ ಪರಿಸರ ಸಂರಕ್ಷಣೆ ಮಾಡಬಹುದೆಂದು ನಾವು ಅಂದು ತಿಳಿದುಕೊಂಡೆವು. ಈಗಲೂ ಪ್ರತಿದಿನ ಹಾಲಿನ ಕವರ್ ಕತ್ತರಿಸುವಾಗ ಅವರು ಹೇಳಿದ ಮಾತು ನೆನಪಾಗುತ್ತದೆ. ಒಂದು ಸಣ್ಣ ಕೆಲಸದಿಂದಲೂ ನಾವು ಹೇಗೆ ಪರಿಸರವನ್ನು ಹಾಳು ಮಾಡದೇ ಉಳಿಸಬಹುದಲ್ಲವೇ? ಮಧ್ಯಾಹ್ನ ಪಿರಮಿಡ್ ವ್ಯಾಲಿಯ ಪತ್ರಿ ಗುರೂಜಿ ಬಂದು ಧ್ಯಾನವನ್ನು ಮಾಡಿಸಿದ್ದು ಅತ್ಯದ್ಭುತ ಅನುಭವವಾಗಿತ್ತು. ಅವರ

ಪುಟ 9 ಕ್ಕೆ ➤

➢ ಪುಟ 7 ರಿಂದ.....

ಜೋಶಿ, ರಾಜ್ಯ ಖಜಾಂಚಿಗಳು, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಿದಾನಂದ ಪಾಟೀಲ್ ಹಾಗೂ ಶ್ರೀಮತಿ ಮಮತಾ ಡಿ.ಕೆಯವರು ವೇದಿಕೆ ಅಲಂಕರಿಸಿದ್ದರು. ಚಿದಾನಂದ ಪಾಟೀಲರು ಸಂಘದ ಯೋಜನೆಗಳನ್ನು, ಮಮತಾ ಡಿ.ಕೆಯವರು ಶಿಕ್ಷಕ ಸಮಾಚಾರದ ಕಾರ್ಯವೈಖರಿ, ವ್ಯಾಪ್ತಿ, ಚಂದಾದಾರತ್ವದ ಬಗ್ಗೆ ವಿವರಣೆ ನೀಡಿದರು.

ಏಳನೇ ಅವಧಿಯಲ್ಲಿ ಅಭ್ಯಾಸವರ್ಗಕ್ಕೆ ಬಂದಿದ್ದ ಶಿಕ್ಷಕಿಯರ ಅಭಿಪ್ರಾಯ, ಅನಿಸಿಕೆಗಳಿಗೆ ವೇದಿಕೆಯಾಯಿತು. ಈ ಸುಸಮಯದಲ್ಲಿ ಆಶೀರ್ವಚನ ನೀಡಲು ಬಂದ ಪಿರಮಿಡ್ ವ್ಯಾಲಿಯ ಶ್ರೀ ಪತ್ರೀಜಿಯವರು ಕೊಳಲು ನುಡಿಸಿ, ಕರ್ಣಾನಂದಗೊಳಿಸಿದರು. ಊಟ ಹಾಗೂ ವಿಶ್ರಾಂತಿಯ ನಂತರ ಶ್ರೀಮತಿ ತೇಜಸ್ವಿನಿ ಅನಂತಕುಮಾರ್‌ರವರ ಯಶೋಗಾಥೆ, ಸಮಾಜಸೇವೆ, ಶಿಕ್ಷಣ ಸೇವೆಗಳ ಬಗ್ಗೆ ತಿಳಿಸಿದರು. ಯಶಸ್ವಿ ಮಹಿಳೆಯಾಗಿ, ಅಭ್ಯಾಸವರ್ಗಕ್ಕೆ ಮಾದರಿಯಾಗಿ ಆದರ್ಶವಾದದ ಜೊತೆಗೆ ಮಾರ್ಗದರ್ಶನ ನಮಗೆ ಸಿಕ್ಕಂತಾಯಿತು. ವೇದಿಕೆ ಹಂಚಿಕೊಂಡ ಶ್ರೀಯುತ ಗಂಗಾಧರಾಚಾರಿ, ಸಹಕಾರ್ಯದರ್ಶಿಗಳು ಸಂಘ ಬಲಗೊಳ್ಳುವ ಬಗ್ಗೆ ಸದಸ್ಯರ ಸೇರ್ಪಡೆ ಅತೀ ಅಗತ್ಯ ಎಂದರು.

ಸಮಾರೋಪ ಸಮಾರಂಭ ಹಾಗೂ ಎರಡೂ ದಿನಗಳೂ ಶ್ರೀಮತಿ ವಿಜಯಲಕ್ಷ್ಮಿ ಮತ್ತು ಶ್ರೀಮತಿ ಮನೋರಮಾರವರು ಕಾರ್ಯಕ್ರಮದ ನಿರೂಪಣೆಯನ್ನು ನಿರ್ವಹಿಸಿದರು. ಶ್ರೀ ಬಾಲಕೃಷ್ಣ ಭಟ್, ಶ್ರೀ ಶಿವಾನಂದ ಸಿಂಧನಕೇರಾ, ಶ್ರೀ ಚಿದಾನಂದ ಪಾಟೀಲ್, ಶ್ರೀಮತಿ ಮಮತಾ ಡಿ.ಕೆ ಯವರು ವೇದಿಕೆಯಲ್ಲಿ ಉಪಸ್ಥಿತರಿದ್ದು ಸಂಘದ ಬಲವರ್ಧನೆ, ಕಾರ್ಯಚಟುವಟಿಕೆಗಳು ಪ್ರತಿ ಜಿಲ್ಲೆಯಲ್ಲೂ ಹೆಚ್ಚು ಹೆಚ್ಚು ನಡೆಯುತ್ತಿರಬೇಕು ಎಂದು ತಿಳಿಸಿದರು. ಅತಿಥಿಗಳಿಗೆ ವಂದನೆ ಸಲ್ಲಿಸುವ ಮೂಲಕ ಎರಡು ದಿನಗಳ ಅಭ್ಯಾಸವರ್ಗಕ್ಕೆ ತೆರೆ ಎಳೆಯಲಾಯಿತು. ಸಂಘದ ಪುರುಷ ಕಾರ್ಯಕರ್ತರಾದ ಶ್ರೀಯುತ ಬಾಲಕೃಷ್ಣಭಟ್‌ಜೀ, ಶ್ರೀಯುತ ಶಿವಾನಂದ ಸಿಂಧನಕೇರಾಜೀ, ಶ್ರೀಯುತ ಸಂದೀಪ್ ಬೂದಿಹಾಳ್‌ಜೀ, ಶ್ರೀಯುತ ಚಿದಾನಂದ ಪಾಟೀಲ್, ಶ್ರೀಯುತ ಗಂಗಾಧರಾಚಾರಿ, ಶ್ರೀಯುತ ಸುರೇಂದ್ರ, ಶ್ರೀಯುತ ಕೊಟ್ರಪ್ಪ, ಶ್ರೀಯುತ ಶ್ರೀನಿವಾಸ್, ಶ್ರೀಯುತ ವೃಷಭೇಂದ್ರರವರು ಹಾಗೂ ಇನ್ನಿತರರು ಕಾರ್ಯಕ್ರಮದ ಯಶಸ್ಸಿಗೆ ಕಾರಣೀಭೂತರಾದರು. ಒಟ್ಟಾರೆ 11 ಜಿಲ್ಲೆಗಳಿಂದ 48 ಜನ ಶಿಕ್ಷಕಿಯರು ಅಭ್ಯಾಸವರ್ಗದಲ್ಲಿ ಭಾಗವಹಿಸಿದ್ದರು. ಕೊನೆಗೆ ಶಾಂತಿಮಂತ್ರದೊಂದಿಗೆ ಅಭ್ಯಾಸವರ್ಗ ಕೊನೆಗೊಂಡಿತು. ●

➢ ಪುಟ 8 ರಿಂದ.....

ಕೊಳಲು ನುಡಿಸಿ, ಧ್ಯಾನ ಮಾಡಿಸಿದ್ದು ಒಳ್ಳೆಯ ಅನುಭವವಾಯಿತು. ಈ ಅನುಭವಗಳನ್ನು ನಮ್ಮ ಮಕ್ಕಳೊಂದಿಗೆ ಹಂಚಿಕೊಂಡೆವು. ಇಂತಹ ಅಭ್ಯಾಸ ವರ್ಗಗಳಿಂದ ಸಾಮಾನ್ಯ ಗೃಹಿಣಿಯರಿಗೂ ಒಳ್ಳೆಯ ಅನುಭವ ಸಿಗುತ್ತದೆ.

**ಶ್ರೀಮತಿ ಸುಮಂಗಲ ಕೆ.ಆರ್.,** ಹಗರಿಬೊಮ್ಮನಹಳ್ಳಿ

---



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಎಲ್ಲಾ ಮುಖ್ಯಸ್ಥರು ಹಾಗೂ ಎಲ್ಲಾ ಸಹೋದರ ಸಹೋದರಿಯರಿಗೂ ವಂದನೆಗಳು. ದಿನಾಂಕ 30 ಮತ್ತು 31 ನೇ ಅಕ್ಟೋಬರ್. ಈ ದಿನಗಳಂದು ಪಿರಮಿಡ್ ವ್ಯಾಲಿಯಲ್ಲಿ, ತರಬೇತಿಯಲ್ಲಿ ರಾಮನಗರದಿಂದ ಭಾಗವಹಿಸಿದ್ದು, ನಮ್ಮೆಲ್ಲರ ಭಾಗ್ಯವೇ ಸರಿ. ಶಾಂತ ವಾತಾವರಣ, ನಮ್ಮನ್ನೆಲ್ಲ ಸ್ವಾಗತಿಸಿದ ರೀತಿ, ಹಾಗೂ ದೊಡ್ಡ ದೊಡ್ಡ ವಿದ್ವಾಂಸರಿಂದ ಎಲ್ಲರ ಮನಮುಟ್ಟುವಂತ ತರಬೇತಿ, ಸಾಂಸ್ಕೃತಿಕ ಕಾರ್ಯಕ್ರಮ, ಸರಿಯಾದ ವೇಳೆಗೆ ಉಟೋಪಚಾರ, ತಂಗಲು ಸುಸಜ್ಜಿತ ವಾದ ಆಸನಗಳು, ಹಾಗೂ ಎಲ್ಲಾ ಜಿಲ್ಲೆಗಳಿಂದ ಬಂದಿದ್ದ ಸಹೋದರ, ಸಹೋದರಿಯರ ಪರಿಚಯ, ನಾವೆಲ್ಲರೂ ದೇವಲೋಕಕ್ಕೆ ಬಂದಷ್ಟು ಖುಷಿಯಾಯಿತು. ತುಂಬಾ ಹೊಸ ಹೊಸ ವಿಷಯಗಳನ್ನು ತಿಳಿದು ಕೊಂಡೆವು. ಈ ತರ ತರಬೇತಿ ಆಗಾಗ ನಡೆಯುತ್ತಿರಬೇಕು. ಎಷ್ಟೋ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ನನ್ನ ಅನಿಸಿಕೆ. ರಾಮನಗರದಿಂದ ಆಗಮಿಸಿದ ನನ್ನ ಸಹೋದರ ಸಹೋದರಿಯರ ಪರವಾಗಿ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘಕ್ಕೆ, ಹೃದಯಪೂರ್ವಕ ಧನ್ಯವಾದಗಳು. ಜೈ ಹಿಂದ್.

**ಶ್ರೀಮತಿ ಶ್ರೀಮತಿ,** ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ,
ತುರುಪಾಲಾಯ, ರಾಮನಗರ ಟೌನ್, ರಾಮನಗರ

---

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಎರಡು ದಿನಗಳ ಶಿಕ್ಷಕಿಯರ ಅಭ್ಯಾಸವರ್ಗವನ್ನು ಹಸಿರಿನಿಂದ ಕೂಡಿದ ಹಾರೋಹಳ್ಳಿಯ ಬಳಿ ಪಿರಮಿಡ್ ವ್ಯಾಲಿಯಲ್ಲಿ ಏರ್ಪಡಿಸಿತ್ತು. ಮೊಟ್ಟಮೊದಲು ಹಸಿರುತಾಣ ನಮ್ಮ ಮನವನ್ನು ಸೂರೆಗೊಂಡಿತು. ಅಲ್ಲಿಗೆ ಆಗಮಿಸಿದ್ದ ಹಿರಿಯರಾದ ಬಾಲಕೃಷ್ಣಭಟ್ ಸರ್, ದತ್ತಾತ್ರೇಯ ಸರ್, ಕೋಟೆಮನೆ ಸರ್, ಪಾರ್ವತಿ ಮೇಡಂ, ತೇಜಸ್ವಿನಿ ಅನಂತಕುಮಾರ್‌ರವರು ವಿಷಯ ಮಂಡನೆ ಮಾಡುವ ರೀತಿ ನಮ್ಮೆಲ್ಲರ ಜ್ಞಾನದಾಹವನ್ನು ತೀರಿಸಿತ್ತು. ನಾವು ಅಲ್ಲಿ ಶಿಕ್ಷಣಕ್ಕೆ, ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಹಾಗು ವಿದ್ಯಾರ್ಥಿಗಳಿಗೆ ಏನನ್ನು ಹೇಗೆ ಕಲಿಸಬೇಕೆಂಬುದನ್ನು ತಿಳಿದುಕೊಂಡೆವು.

**ಕಲ್ಬುರ್ಗಿ ತಂಡ**

---



ಪ್ರಕೃತಿಯ ರಮ್ಯ ವಾತಾವರಣದಲ್ಲಿ ಪಿರಮಿಡ್ ವ್ಯಾಲಿಯಲ್ಲಿ ಅತ್ಯುತ್ತಮವಾಗಿ ರಾಜ್ಯ ಮಟ್ಟದ ಮಹಿಳಾ ಅಭ್ಯಾಸ ವರ್ಗವನ್ನು ಆಯೋಜಿಸಿದ ಸಂಘಟಕರಿಗೆ ಅನಂತ ಧನ್ಯವಾದಗಳು. ಬೇರೆ ಬೇರೆ ಜಿಲ್ಲೆಗಳಿಂದ ಆಗಮಿಸಿದ ಎಲ್ಲರಿಗೂ ಒಂದಲ್ಲ ಒಂದು ರೀತಿಯಲ್ಲಿ ವೇದಿಕೆಯಲ್ಲಿ ಅವಕಾಶ ಕಲ್ಪಿಸಿದ್ದಲ್ಲದೆ, ಧ್ಯಾನ ಮತ್ತು ಜ್ಞಾನ ಎರಡನ್ನೂ ವೃದ್ಧಿಸಿಕೊಳ್ಳಲು ಮುಕ್ತ ಅವಕಾಶ ಒದಗಿಸಲಾಗಿತ್ತು. ನುರಿತ ಉಪನ್ಯಾಸಕರಿಂದ ಆಯ್ದ ವಿಷಯಗಳ ಕುರಿತು ನಡೆದ ಉಪನ್ಯಾಸ ನಮ್ಮಲ್ಲಿ ಹೊಸ ಚೇತನವನ್ನು ಸೃಷ್ಟಿಸಿದೆ. NEP ಬಗ್ಗೆ ಇನ್ನೂ ಹೆಚ್ಚು ತಿಳಿದುಕೊಳ್ಳಲು ಆಸಕ್ತಿ ಇದ್ದರೂ ಸಮಯದ ಅಭಾವದಿಂದ ಅದು ಸಾಧ್ಯವಾಗಲಿಲ್ಲ. ಊಟ ಉಪಚಾರ ಅತ್ಯದ್ಭುತವಾಗಿತ್ತು... ಎಲ್ಲಕ್ಕಿಂತ ಹೆಚ್ಚಾಗಿ, ವಿವಿಧ ಜಿಲ್ಲೆಗಳ ಸದಭಿರುಚಿಯ ಮಹಿಳಾ ನಾಯಕಿಯರನ್ನು ಭೇಟಿಯಾಗಲು ಉತ್ತಮ ಅವಕಾಶ ಸಿಕ್ಕಂತಾಯಿತು. ಇಂತಹ ಅದ್ಭುತ ಅಭ್ಯಾಸ ವರ್ಗವನ್ನು ಆಯೋಜಿಸಿದ ಎಲ್ಲ ಆಯೋಜಕರಿಗೆ ಮನಃ ಪೂರ್ವಕ ಧನ್ಯವಾದಗಳು. ಇಂತಹ ಕಾರ್ಯಕ್ರಮಗಳು ಇನ್ನಷ್ಟು ಮೂಡಿಬರಲಿ.

**ಶ್ರೀಮತಿ ಡಾ॥ ನವೀನ ಶೆಟ್ಟಿಗಾರ್,** ಜೆ.ಜೆ. ಚಿಟ್ನಿಸ್ ಇಂಗ್ಲೀಷ್
ಮೀಡಿಯಂ ಪ್ರೌಢಶಾಲೆ, ತಿಲಕ್ವಾಡಿ, ಬೆಳಗಾವಿ

---

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಎಲ್ಲಾ ಮುಖ್ಯಸ್ಥರು ಹಾಗೂ ಎಲ್ಲಾ ಸಹೋದರ ಸಹೋದರಿಯರಿಗೂ ನಮಸ್ಕಾರಗಳು. ದಿನಾಂಕ 30 ಮತ್ತು 31 ಅಕ್ಟೋಬರ್ ದಲ್ಲಿ ನಡೆದ ತರಬೇತಿಯಲ್ಲಿ ನನಗೆ ಭಾಗವಹಿಸಲು ಆಗಲಿಲ್ಲ ಅನಿವಾರ್ಯ ಕಾರಣದಿಂದ ನನಗೆ ರಾಮನಗರಕ್ಕೆ ಬರಲಿಕ್ಕೆ ಆಗಲಿಲ್ಲ ಮೇಡಂ ಅದಕ್ಕಾಗಿ ಕ್ಷಮೆ ಇರಲಿ. ಮುಂದೆ ಕಾರ್ಯಕ್ರಮ ಎಲ್ಲಿದ್ದರೂ ನಾನು ಬಂದೇ ಬರುತ್ತೇನೆ ಮೇಡಂ. ಎಲ್ಲರಿಗೂ ಧನ್ಯವಾದಗಳು.

**ಎಸ್. ಎಸ್. ಸಮಾಜೆ,** ಚಿಕ್ಕೋಡಿ ●

ಸದಭಿಮಾನವು ನಮ್ಮ ಭಾಷೆಯ ಸಾಹಿತ್ಯ –ಸಂಸ್ಕೃತಿಗಳಿಂದ ಪ್ರೇರಿತವಾದದ್ದಿರಬೇಕು. – ರಂ.ಶ್ರೀ. ಮುಗಳಿ

# ವಿದ್ಯಾರ್ಥಿ ಜ್ಞಾನ ಮಿತ್ರ

# ಭಾರತ ಪರಿಚಯ



**ಜೆ. ಎಂ. ಜೋಶಿ**
**ರಾಜ್ಯ ಕೋಶಾಧ್ಯಕ್ಷರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

## ಭಗತ್‌ಸಿಂಗ್

ಭಯಭೀತಿ ಹೊಂದಿರದ ಯುವಕರ ನಿರಂತರ ಪರಿಶ್ರಮ ಸಾಹಸ, ಬಲಿದಾನ ಹಾಗೂ ನಿಷ್ಠೆಗಳಿಂದಲೇ ಸುಧಾರಣೆ ತರಲು ಸಾಧ್ಯ ಎಂಬ ಆತ್ಮವಿಶ್ವಾಸವನ್ನು ಹೊಂದಿದ್ದ ಆ ರಾಷ್ಟ್ರಭಕ್ತನೇ ಭಗತ್‌ಸಿಂಗ್.

1907ರ ಸೆಪ್ಟಂಬರ್ 28 ರಂದು ಸರ್ದಾರ್ ಕಿಶನ್‌ಸಿಂಗ್ ಮತ್ತು ವಿದ್ಯಾವತಿ ದಂಪತಿಗಳ ಮೂರನೇ ಪುತ್ರನಾಗಿ ಜನ್ಮ ತಾಳಿದವನೇ ಪ್ರಖರ ದೇಶಭಕ್ತ ಭಗತ್‌ಸಿಂಗ್. ಬಾಲ್ಯದಿಂದಲೇ ಓದು ಬರಹವೆಂದರೆ ಅತೀವ ಆಸಕ್ತಿ. 1919ನೇ ಇಸ್ವಿಯಲ್ಲಿ ನಮ್ಮ ಭಾರತದಲ್ಲಿ ಅತ್ಯಂತ ದುಃಖದಾಯಕ ಘಟನೆ ಸಂಭವಿಸಿತು. ಜಲಿಯನ್ ವಾಲಾಬಾಗ್‌ನಲ್ಲಿ ಬ್ರಿಟಿಷರ ಗುಂಡುಗಳಿಗೆ ಸುಮಾರು 2000 ಜನರು ಆಹುತಿಯಾದರು. ಈ ಘಟನೆ 12 ವರ್ಷದ ಈ ಬಾಲಕನ ಮನಸ್ಸಿನ ಮೇಲೆ ಅಗಾಧ ಪರಿಣಾಮವು ಬೀರಿತು. ಶಾಲೆಗೆ ಹೋಗಬೇಕಾಗಿದ್ದ ಆ ಬಾಲಕ ತನ್ನ ಹಳ್ಳಿಯಿಂದ ದುರ್ಘಟನೆ ನಡೆದ ಆ ಸ್ಥಳಕ್ಕೆ ಹೋಗಿ ಒಂದೆಡೆ ಅಂತರ್ಮುಖಿಯಾಗಿ ಬಹುಕಾಲ ನಿಂತು, ನಂತರ ಅಲ್ಲಿದ್ದ ಸ್ವಲ್ಪ ಮಣ್ಣನ್ನು ತೆಗೆದುಕೊಂಡು ಶೇಖರಿಸಿಕೊಂಡು ಹಿಂತಿರುಗಿದನು. ಒಂಭತ್ತನೇ ತರಗತಿಗೆ ಸೇರುವ ಹೊತ್ತಿಗೇ ಭಗತ್ ಸಿಂಗ್ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿ ತನ್ನ ದೇಶಕ್ಕೋಸ್ಕರ ಹೋರಾಡುವ ನಿಶ್ಚಯಕ್ಕೆ ಬಂದು, ತಂದೆಯ ಅನುಮತಿಯನ್ನು ಪಡೆದು ರಾಷ್ಟ್ರೀಯ ಅಸಹಕಾರ ಆಂದೋಲನದಲ್ಲಿ ಭಾಗವಹಿಸಿದನು.

ಜಲಿಯನ್ ವಾಲಾಬಾಗಿನ ರಕ್ತಸಿಕ್ತವಾಗಿದ್ದ ಮಣ್ಣನ್ನು ನಿಧಿಯಂತೆ ಕಾಪಾಡಿಕೊಂಡು ಬಂದಿದ್ದ ಬಾಲಕ ಭಗತ್‌ಸಿಂಗ್ ಮುಂದೆ ತನ್ನ ಕ್ರಾಂತಿಕಾರಿ ಗುಂಪಿನ ಸಹಾಯದಿಂದ ಬ್ರಿಟಿಷ್ ಸರ್ಕಾರದ ವಿರುದ್ಧ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾನೆ. ಇದರ ಫಲವಾಗಿ ಮರಣದಂಡನೆಗೆ ಗುರಿಯಾಗಿ ತನ್ನ ಸಹಚರರಾದ ಸುಖದೇವ್, ರಾಜಗುರು, ಭಟುಕೇಶ್ವರ ದತ್ತರೊಂದಿಗೆ ಹಸನ್ಮುಖಿಯಾಗಿ ತಾಯಿ ಭಾರತಾಂಬೆಯ ಸ್ವಾತಂತ್ರ್ಯದ ಹಣತೆಗೆ ತೈಲವೆಂಬಂತೆ ವೀರಯೋಧನಾಗಿ ಅಮರನಾದನು.

**ಈ ಪ್ರಶ್ನೆಗಳಿಗೆ ಉತ್ತರಗಳನ್ನು ಓದುಗರು kssta55@gmail.com ಮೂಲಕ ಕಳುಹಿಸುವುದು. ಸರಿಯಾದ ಉತ್ತರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

## ಒಂದಿಷ್ಟು ಇತಿಹಾಸ

1. ಕರ್ನಾಟಕದ ಜಲಿಯನ್ ವಾಲಾಬಾಗ್ ಯಾವುದು?
2. ಕದಂಬ ಅರಸರ ಧರ್ಮ ಯಾವುದಾಗಿತ್ತು?
3. ಬುಕ್ಕರಾಯನ ಧರ್ಮ ಸಮದೃಷ್ಟಿ ಸಾರುವ ಶಾಸನ ಎಲ್ಲಿದೆ?
4. ಕನ್ನಡ ಬಾವುಟದ ನಿರ್ಮಾತೃ ಯಾರು?
5. ಮೈಸೂರಿನ ಮೊದಲ ದಿವಾನರು ಯಾರಾಗಿದ್ದರು?

## ಜ್ಞಾನ ವಿಜ್ಞಾನ

1. 'ವೇದಗಳ ತಾಯಿ' ಎಂದು ಕರೆಯಿಸಿಕೊಂಡಿರುವ ಮಂತ್ರದ ಹೆಸರೇನು?
2. ಕನ್ನಡ ಸಾಹಿತ್ಯ ಪರಿಷತ್ತಿನ ಲಾಂಛನದ ಧ್ಯೇಯ ವಾಕ್ಯ ಯಾವುದು?
3. ಕರ್ನಾಟಕದ ಪಕ್ಷಿ ವಿಜ್ಞಾನಿ ಎಂದು ಹೆಸರಾದ ಸಾಹಿತಿ ಯಾರು?
4. ಮಹಾವೀರಾಚಾರ್ಯನ ಅತ್ಯಂತ ಶ್ರೇಷ್ಠ ಕೃತಿ ಯಾವುದು?
5. ಭಾರತದ ಮೊದಲ ವಿಜ್ಞಾನ ಪತ್ರಿಕೆಯನ್ನು ಆರಂಭಿಸಿದ ಕನ್ನಡಿಗ ಯಾರು?

## ಅಕ್ಟೋಬರ್ ಸಂಚಿಕೆಯ ಉತ್ತರಗಳು

**ಒಂದಿಷ್ಟು ಇತಿಹಾಸ – ಉತ್ತರಗಳು**

1. ಹಿಂದೂಸ್ಥಾನ
2. ಸಾಮ್ರಾಟ್ ಅಶೋಕ
3. ನಲಂದಾ ವಿಶ್ವವಿದ್ಯಾಲಯ
4. ಕಿತ್ತೂರು ರಾಣಿ ಚೆನ್ನಮ್ಮ
5. ವಂದೇ ಮಾತರಂ

**ಜ್ಞಾನ–ವಿಜ್ಞಾನ – ಉತ್ತರಗಳು**

1. ಶ್ರೀ ಮಧ್ವಾಚಾರ್ಯರು
2. ಲಾಲಾ ಲಜಪತರಾಯ್
3. ಬೋದಾಯನ
4. ಪ್ರೊ॥ ಜಗದೀಶ ಚಂದ್ರ ಬೋಸ್
5. ಸುಶ್ರುತ

**ನರಕಕ್ ಇಳ್ಸಿ ನಾಲ್ಗೆ ಸೀಳ್ಸಿ ಬಾಯ್ ಒಲಸಾಕಿದ್ರೂನೆ – ಮೂಗ್ನಲ್ ಕನ್ನಡ್ ಪದವಾಡ್ತೀನಿ. – ಜಿ ಪಿ. ರಾಜರತ್ನಂ**

# ಸಂಸ್ಕೃತ ಅಧ್ಯಾಪಕರಿಗೆ ಎನ್. ಇ. ಪಿ. –2020 ರ ಪರಿಚಯಾತ್ಮಕ ಕಾರ್ಯಾಗಾರ




ಕರ್ನಾಟಕ ರಾಜ್ಯ ಪ್ರೌಢಶಾಲಾ ಸಂಸ್ಕೃತ ಅಧ್ಯಾಪಕ ಸಂಘ (ರಿ) ಪ್ರಜ್ಞಾವರ್ಧಿನೀ ಟ್ರಸ್ಟ್ ಇವರ ಸಹಯೋಗದಲ್ಲಿ ದಿನಾಂಕ 17, 18 ನವೆಂಬರ್ 2021 ರಂದು ಜಯನಗರದ ಎನ್.ಎಮ್.ಕೆ.ಆರ್.ವಿ. ಕಾಲೇಜಿನ ಶಾಶ್ವತೀ ಸಭಾಂಗಣ ದಲ್ಲಿ ಪ್ರೌಢಶಾಲಾ ಸಂಸ್ಕೃತ ಅಧ್ಯಾಪಕರಿಗೆ ಎನ್. ಇ. ಪಿ. –2020 ರ ಪರಿಚಯಾತ್ಮಕ ಕಾರ್ಯಾಗಾರ ನಡೆಯಿತು. ಶ್ರೀಮತಿ ಲಲಿತಾ ಚಂದ್ರಶೇಖರ ನಿರ್ದೇಶಕರು, ಅಲ್ಪಸಂಖ್ಯಾತ ಭಾಷಾ ನಿರ್ದೇಶನಾಲಯ, ಶ್ರೀಮತಿ ಶಮೀಮ್ ತಾಜ್, ಉಪ ನಿರ್ದೇಶಕರು, ಡಾ. ವೆಂಕಟರಮಣ. ದೇ. ಭಟ್ಟ ಸಂಸ್ಕೃತ ವಿಷಯ ಪರಿವೀಕ್ಷಕರು, ಶ್ರೀ ಚಿದಾನಂದ ಪಾಟೀಲ್ ಪ್ರಧಾನ ಕಾರ್ಯದರ್ಶಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ನಾರಾಯಣ ಭಟ್ಟ, ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರೌಢಶಾಲಾ ಸಂಸ್ಕೃತ ಅಧ್ಯಾಪಕ ಸಂಘ ಶ್ರೀಮತಿ ಸುಮಂಗಲಾ ಹೆಗಡೆ ಕಾರ್ಯದರ್ಶಿ, ಕೃಷ್ಣ ಭಟ್ಟ, ಕೋಶಾಧಿಕಾರಿ ಸಂಸ್ಕೃತ ಅಧ್ಯಾಪಕ ಸಂಘ, ಡಾ. ಸತೀಶ್ ಹೆಗಡೆ, ಸಂಸ್ಥಾಪಕರು ಪ್ರಜ್ಞಾವರ್ಧಿನೀ ಟ್ರಸ್ಟ್ ಮುಂತಾದವರು ಕಾರ್ಯಾಗಾರದಲ್ಲಿ ಸೂಕ್ತ ಮಾರ್ಗದರ್ಶನ ನೀಡಿದರು

ಶ್ರೀಮತಿ ಪಾರ್ವತಿ, ಡಿ. ಎಸ್. ಇ. ಆರ್ ಟಿ, ಡಾ. ಗುಣವತಿ ಆರ್. ಎಮ್. ಎಸ್. ಎ., ಶ್ರೀಮತಿ ಸಂಧ್ಯಾ ಹೆಗಡೆ (ನಲಿ ಕಲಿ ಯೋಜನೆ) ಇವರು ಸಂಸ್ಕೃತ ಭಾಷಾ ಕಲಿಕೆಗೆ ಇರುವ ಅವಕಾಶ ಮತ್ತು ಎನ್ ಇ ಪಿ 2020 ರಲ್ಲಿ ಸಂಸ್ಕೃತ ಭಾಷಾ ಶಿಕ್ಷಣಕ್ಕೆ ನೀಡಿದ ಆದ್ಯತೆ ಬಗ್ಗೆ ಮಾಹಿತಿ ನೀಡಿದರು. ಬೆಂಗಳೂರು ಮಹಾನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ ಚಿಕ್ಕಬಳ್ಳಾಪುರ ಜಿಲ್ಲೆಗಳಿಂದ 100 ಕ್ಕೂ ಹೆಚ್ಚು ಪ್ರೌಢಶಾಲಾ ಸಂಸ್ಕೃತ ಶಿಕ್ಷಕರು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪೂರ್ಣ ಸಹಕಾರ ಮತ್ತು ಸೂಕ್ತ ಮಾರ್ಗದರ್ಶನದಲ್ಲಿ ಈ ಕಾರ್ಯಾಗಾರ ನಿರೀಕ್ಷಿತ ಯಶಸ್ಸನ್ನು ಕಂಡಿತು.

ವರದಿ : ನಾರಾಯಣ ಭಟ್ಟ

## ತರಬೇತಿ ಎಂಬ ಅನುಭೂತಿ

ಹಚ್ಚ ಹಸುರಿನ ಬನವನ
ನಡೆದಿದೆಯಿಲ್ಲಿ ಮಹಿಳೆಯರ
ಅಭ್ಯಾಸದ ಅಭಿಯಾನ
ಹೊಸಚಿಗುರು ಹಳೇಬೇರುಗಳು
ಕೂಡಿ ಆಯ್ತು ಸಂಲಗ್ನತ್ವ ಪಾವನ
ಹೊಸ ಬೆಳಕಿನ ಆಶಾವಾದದ ಚಿಂತನ
ತೂರಿಬರುವ ವೇದಿಕೆಯಿದು ಚಿರಂತನ
ದೇಶ ಮೊದಲು ಎಂಬ ತೊದಲು
ಉಲಿವ ನಾಲಗೆಯೇ
ಬಲು ಅಪ್ಯಾಯಮಾನ
ಜ್ಞಾನ ವಿಲ್ಲಿ ಹೊಳೆದಿದೆ ದೇದೀಪ್ಯಮಾನ
ಸಂಸ್ಕೃತಿ ಪರಂಪರೆಗಳಿಗಿರಲಿ
ನಿಮ್ಮ ನಿಮ್ಮದೇ ಆದ ಅಭಿಮಾನ ಸ್ವಾಭಿಮಾನ
ಸನ್ನಡತೆಗೆ ಚಾರಿತ್ರ್ಯಕೆ ಸದಾ ಸನ್ಮಾನ
ವೈಚಾರಿಕತೆಯ ವಿವಿಧ ದೃಷ್ಟಿ ಕೋನ
ಸದಾ ಜ್ಞಾನ ಪಾನ ಜ್ಞಾನ ಸ್ನಾನ
ಮಿಂದೇಳಲಿ ಶಿಕ್ಷಕರೆಂಬ ಸಜ್ಜನ
ದೇಶದ ಹಿತಕೆ ಮೀಸಲಿಡಲಿ
ನಮ್ಮ ನಿಮ್ಮತನುಮನ
ಕೈಗೊಂಡ ಸಂಕಲ್ಪಗಳು
ಪಾಲನೆಯಾಗುತಿರಲಿ ಅನುದಿನ.....

ರಚನೆ : ಸುಮಂಗಳ. ಎಸ್ ಹಾರೋಕೊಪ್ಪ, ಸ.ಶಿ,
GJC for boys, High school section,
Ramanagaram town

## ಅಭಿನಂದನೆ







ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ದಕ್ಷಿಣ ಮಧ್ಯ ಕ್ಷೇತ್ರೀಯ ಪ್ರಮುಖರಾಗಿ ಪುನರಾಯ್ಕೆಯಾಗಿರುವ ಶ್ರೀಯುತ ಬಾಲಕೃಷ್ಣಭಟ್ ಸರ್ ರವರಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಅಭಿನಂದಿಸುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀಯುತ ನಾಡೋಜ ಮಹೇಶ್ ಜೋಶಿಯವರಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಅಭಿನಂದನೆಗಳನ್ನು ಅರ್ಪಿಸುತ್ತಾ, ಕನ್ನಡ ನಾಡು–ನುಡಿ ಏಳಿಗೆಗೆ ನಿಮ್ಮ ಜೊತೆ ನಾವೆಲ್ಲಾ ಇರುತ್ತೇವೆಂಬ ಭರವಸೆಯನ್ನು ನೀಡುತ್ತಿದೆ.



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ. ಕಲಬುರಗಿ ಘಟಕ ಕಾರ್ಯಕರ್ತರೊಂದಿಗೆ ಶಿಕ್ಷಣ ಸಚಿವರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಹಿರಿಯ ಕಾರ್ಯಕರ್ತರಾದ ಶ್ರೀ ಲಕ್ಷ್ಮಣ್‌ರಾವ್‌ರವರ ಮೊಮ್ಮಗಳಾದ ಕುಮಾರಿ ಅಮೂಲ್ಯ ಜಿ. ರಾವ್ ಈ ವಿದ್ಯಾರ್ಥಿನಿ ಎಸ್.ಎಸ್.ಎಲ್.ಸಿ–2021 ರ ಪರೀಕ್ಷೆಯಲ್ಲಿ 98.08% ಅಂಕಗಳನ್ನು ಗಳಿಸಿ ಉತ್ತೀರ್ಣಳಾಗಿದ್ದಾಳೆ.



ಅದಕ್ಕಾಗಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಅಭಿನಂದಿಸುತ್ತದೆ.

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-11-2021 Date of Posting 20th or 21st of every month Posted at Periodical Rate

# ರಾಜ್ಯ ಮಟ್ಟದ ಮಹಿಳಾ ಅಭ್ಯಾಸ ವರ್ಗದ ಚಿತ್ರಗಳು




IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com